## ಪದ್ಯಭಾಗ 01

## ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ

- ಕುಮಾರವ್ಯಾಸ

### ಮತ್ಸ್ಯನಗರದ ಉತ್ತರಭಾಗದಲ್ಲಿ ಕೌರವನ ಧಾಳಿ

**ಕೇಳು ಜನಮೇಜಯ ಸುಯೋಧನ**
**ನಾಳು ಮುತ್ತಿತು ತುರುಗಳನು ಮೇ**
**ಲಾಳು ಕವಿದುದು ಭೀಷ್ಮ ಕರ್ಣ ದ್ರೋಣ ಮೊದಲಾಗಿ ।**
**ಕೋಲ ಸೂಟಿಯ ಸರಿವಳೆಗೆ ಗೋ**
**ಪಾಲ ಪಡೆ ಮುಗ್ಗಿದುದು ಗೋವರ**
**ಸಾಲ ಹೊಯ್ದರು ಕರ್ಣ ದುಶ್ಶಾಸನ ಜಯದ್ರಥರು ॥ 1 ॥**

ಪದವಿಭಾಗ-ಅರ್ಥ:ಕೇಳು ಜನಮೇಜಯ ಸುಯೋಧನನ+ ಆಳು(ಸೈನಿಕ- ಸೈನಿಕರು) ಮುತ್ತಿತು ತುರುಗಳನು(ಗೋವುಗಳನ್ನು) + ಮೇಲೆ+ ಆಳು (ಕಾದಿಟ್ಟ ಸೈನ್ಯ) ಕವಿದುದು ಭೀಷ್ಮ ಕರ್ಣ ದ್ರೋಣ ಮೊದಲಾಗಿ, ಕೋಲ(ಕೋಲು- ಬಾಣದ) ಸೂಟಿಯ(ಪಂಜು, ವೇಗ) ಸರಿವಳೆಗೆ (ಸರಿವ ಅಲೆ- ಚಲಿಸುವ ಸೈನ್ಯದ ಅಲೆಗೆ?) ಗೋಪಾಲ ಪಡೆ ಮುಗ್ಗಿದುದು (ನೊಂದು ಸೋತಿತು) ಗೋವರಸಾಲ(ಸಾಲ- ಸಾಲು- ಸಮೂಹ) ಹೊಯ್ದರು(ಹೊಡೆದರು) ಕರ್ಣ ದುಶ್ಶಾಸನ ಜಯದ್ರಥರು.

ಅರ್ಥ:ಜನಮೇಜಯ ರಾಜನೇ ಕೇಳು, ದುರ್ಯೋಧನನ ಸೈನಿಕರು ಗೋವುಗಳನ್ನು ಮುತ್ತಿದರು. ಅದರ ಜೊತೆ ಕಾದಿಟ್ಟ ಸೈನ್ಯವೂ ಕವಿದುದು ಭೀಷ್ಮ ಕರ್ಣ ದ್ರೋಣ ಮೊದಲಾಗಿ, ಹೊಡೆದ ಬಾಣದ ವೇಗಕ್ಕೆ, ಚಲಿಸುವ ಸೈನ್ಯದ ಅಲೆಗೆ ಗೋವಳರ ಪಡೆ ನೊಂದು ಸೋತಿತು. ಕರ್ಣ ದುಶ್ಶಾಸನ ಜಯದ್ರಥರು ಗೋವಳರ ಸಾಲ- ಸಮೂಹವನ್ನು ಹೊಡೆದರು.

**ಉತ್ತರನ ಪೌರುಷ**

**ಬೆಗಡು ಮುಸುಕಿದ ಮುಖದ ಭೀತಿಯ**
**ಢಗೆಯ ಹೊಯ್ಲಿನ ಹೃದಯ ತುದಿ ನಾ**
**ಲಗೆಯ ತೊದಳಿನ ನುಡಿಯ ಬೆರಗಿನ ಬರತ ತಾಳಿಗೆಯ ।**
**ಅಗಿವ ಹುಯ್ಯಲುಗಾರ ಬಹಲೋ**
**ಲಗಕೆ ಬಂದನು ನೃಪ ವಿರಾಟನ**
**ಮಗನ ಕಾಲಿಂಗೆರಗಿದನು ದೂರಿದನು ಕಳಕಳವ ॥ 6 ॥**

ಪದವಿಭಾಗ-ಅರ್ಥ:ಬೆಗಡು ಮುಸುಕಿದ ಮುಖದ ಭೀತಿಯ ಢಗೆಯ ಹೊಯ್ಲಿನ ಹೃದಯ ತುದಿ ನಾಲಗೆಯ ತೊದಳಿನ ನುಡಿಯ ಬೆರಗಿನ ಬರತ ತಾಳಿಗೆಯ ಅಗಿವ ಹುಯ್ಯಲುಗಾರ ಬಹಳ+ ಓಲಗಕೆ ಬಂದನು ನೃಪ ವಿರಾಟನ ಮಗನ ಕಾಲಿಂಗೆ+ ಎರಗಿದನು ದೂರಿದನು ಕಳಕಳವ.

ಬೆಗಡು= ಆಶ್ಚರ್ಯ. ಭಯ; ಮುಸುಕಿದ ಮುಖದ ಭೀತಿಯ ಢಗೆಯ ಹೊಯ್ಲಿನ ಹೃದಯ= ಏದುಸಿರಿನ, ಬಡಿದುಕೊಳ್ಳುತ್ತಿರುವ ಹೃದಯದ ಸದ್ದಿನ, ತುದಿ ನಾಲಗೆಯ ತೊದಳಿನ ನುಡಿಯ= ನಾಲಗೆಯಾಡದೆ ತುದಿನಾಲಿಗೆಯಲ್ಲಿ ತೊದಲುತ್ತಿರುವ, ಬೆರಗಿನ= ಅಚ್ಚರಿಯ, ಬರತ ತಾಳಿಗೆಯ ಅಗಿವ= ಒಣಗಿದ ನಾಲಿಗೆ ಅಂಕುಲಿನೊಡನೆ ಬಾಯಿಬಾಯಿ ಬಿಡುತ್ತಿರುವ,, ಹುಯ್ಯಲುಗಾರ= ಗೋಳಾಡುವ, ಬಹಳ+ ಓಲಗಕೆ= ಬಹಳ ಹೆಂಗಳೆಯರೂ ಜನರೂ ಇದ್ದ ಸಭೆಗೆ ಬಂದನು. ನೃಪ ವಿರಾಟನ ಮಗನ ಕಾಲಿಂಗೆ+ ಎರಗಿದನು ದೂರಿದನು ಕಳಕಳವ= ನೃಪ ವಿರಾಟನ ಮಗನ ಕಾಲಿಗೆ ಬಿದ್ದು ಎದುರಾದ ಸಂಕಟವನ್ನು ದೂರಿದನು.

ಅರ್ಥ:ಆ ಗೋವಳನು, ಭಯವು ತುಂಬಿದ ಮುಖದ ಭೀತಿಯ, ಏದುಸಿರಿನ, ಬಡಿದುಕೊಳ್ಳುತ್ತಿರುವ ಹೃದಯದ ಸದ್ದಿನ, ನಾಲಗೆಯಾಡದೆ ತುದಿನಾಲಿಗೆಯಲ್ಲಿ ತೊದಲುತ್ತಿರುವ, ಅಚ್ಚರಿಯ, ಒಣಗಿದ ನಾಲಿಗೆ ಅಂಕುಲಿನೊಡನೆ ಬಾಯಿಬಾಯಿ ಬಿಡುತ್ತಿರುವ, ಗೋಳಾಡುತ್ತಿರುವ, ಬಹಳ ಹೆಂಗಳೆಯರೂ ಜನರೂ ಇದ್ದ ಸಭೆಗೆ ಬಂದನು. ನೃಪ ವಿರಾಟನ ಮಗನ ಕಾಲಿಗೆ ಬಿದ್ದು ಎದುರಾದ ಸಂಕಟವನ್ನು ದೂರಿದನು.

**ಏಳು ಮನ್ನೆಯ ಗಂಡನಾಗು ನೃ**
**ಪಾಲ ಕೌರವ ರಾಯ ತುರುಗಳ**
**ಕೋಳ ಹಿಡಿದನು ಸೇನೆ ಬಂದುದು ಧರಣಿಯಗಲದಲಿ ।**
**ದಾಳಿ ಬರುತಿದೆ ಕರೆಸಿಕೋ ನಿ**
**ನ್ನಾಳು ಕುದುರೆಯ ರಾಣಿವಾಸದ**
**ಗೂಳೆಯವ ತೆಗೆಸೆಂದು ನುಡಿದನು ಬಿನ್ನಹದ ಬಿರುಬ ॥ 7 ॥**
ಪದವಿಭಾಗ-ಅರ್ಥ:ಏಳು ಮನ್ನೆಯ ಗಂಡನಾಗು ನೃಪಾಲ ಕೌರವ ರಾಯ ತುರುಗಳ ಕೋಳ ಹಿಡಿದನು ಸೇನೆ ಬಂದುದು ಧರಣಿಯ+ ಅಗಲದಲಿ ದಾಳಿ ಬರುತಿದೆ ಕರೆಸಿಕೋ ನಿನ್ನಾಳು ಕುದುರೆಯ ರಾಣಿವಾಸದ ಗೂಳೆಯವ ತೆಗೆಸು+ ಎಂದು ನುಡಿದನು ಬಿನ್ನಹದ ಬಿರುಬ.

ಏಳು ಮನ್ನೆಯ ಗಂಡನಾಗು= ಗೋಪಾಲಕನು ಉತ್ತರನಿಗೆ, 'ಏಳು ಮನ್ನೆಯ- ಶೂರರ, ಗೌರವವುಳ್ಳವರ ಗಂಡನಾಗು- ಮುಖ್ಯನಾಗು, ನೃಪಾಲ ಕೌರವ ರಾಯ ತುರುಗಳ ಕೋಳ ಹಿಡಿದನು= ರಾಜ ಕೌರವರಾಯನು ತುರುಗಳ ಕೋಳ(ಕುಟ್ಟುವ ಕೆಲಸಕ್ಕೆ ಉಪಯೋಗಿಸುವ ಕಬ್ಬಿಣದ ಒಂದು ಉಪಕರಣ) ಹಿಡಿದನು= ನಮ್ಮ ಗೋವುಗಳ ಕೊರಳ ಹಗ್ಗವನ್ನು ಹಿಡಿದಿದ್ದಾನೆ. ಸೇನೆ ಬಂದುದು ಧರಣಿಯ+ ಅಗಲದಲಿ ದಾಳಿ ಬರುತಿದೆ+= ಭೂಮಿಯ ಅಗಲಕ್ಕೂ ತುಂಬಿದ ದೊಡ್ಡ ಸೇನೆ ಬಂದಿದೆ. ಅದು ದಾಳಿ ಮಾಡಲು ಬರುತ್ತಿದೆ. ತಡಮಾಡದೆ ನಿನ್ನ ಸೈನಿಕರಗಳನ್ನೂ, ಕುದುರೆಗಳನ್ನೂ ಕರೆಸಿಕೋ. ರಾಣಿವಾಸದ ಗೂಳೆಯವ ತೆಗೆಸು+ ಎಂದು ನುಡಿದನು ಬಿನ್ನಹದ ಬಿರುಬ -ಗಡುಸಾದ= ರಾಣಿವಾಸದ ಗುಂಪನ್ನು ತೆಗೆಸು, ಎಂದು ಗೋವಳಮು ಗಡುಸಾದ ಭಾಷೆಯಲ್ಲಿ ಬಿನ್ನಹ - ವಿಜ್ಞಾಪನೆಯನ್ನು ನುಡಿದನು- ಮಾಡಿದನು. -

ಅರ್ಥ:ಗೋಪಾಲಕನು ಉತ್ತರನಿಗೆ,'ಏಳು ಶೂರರ ಮುಖ್ಯನಾಗು, ರಾಜ ಕೌರವರಾಯನು ನಮ್ಮ ಗೋವುಗಳ ಕೊರಳ ಹಗ್ಗವನ್ನು ಹಿಡಿದಿದ್ದಾನೆ. ಭೂಮಿಯ ಅಗಲಕ್ಕೂ ತುಂಬಿದ ಅವನ ದೊಡ್ಡ ಸೇನೆ ಬಂದಿದೆ. ಅದು ದಾಳಿ ಮಾಡಲು ಬರುತ್ತಿದೆ. ತಡಮಾಡದೆ ನಿನ್ನ ಸೈನಿಕರಗಳನ್ನೂ, ಕುದುರೆಗಳನ್ನೂ ಕರೆಸಿಕೋ. ರಾಣಿವಾಸದ ಗುಂಪನ್ನು ತೆಗೆಸು, ಎಂದು ಗೋವಳಮು ಗಡುಸಾದ ಭಾಷೆಯಲ್ಲಿ ವಿಜ್ಞಾಪನೆಯನ್ನುಮಾಡಿದನು.

**ಎಂದಡುಬ್ಬರಿಸಿದನು ತಾ ಕಲಿ**
**ಯೆಂದು ಬಗೆದನು ಮೀಸೆಯನು ಬೆರ**
**ಳಿಂದ ತಿರುಹುತ ಮುಗುಳುನಗೆ ಹರುಷದಲಿ ಮೈಮರೆದ ।**
**ಸಂದಣಿಸಿ ರೋಮಾಂಚ ಕೆಲಬಲ**
**ದಿಂದುಮುಖಿಯರ ನೋಡಿದನು ನಲ**
**ವಿಂದ ನುಡಿದನು ತನ್ನ ಪೌರುಷತನದ ಪರಿಣತೆಯ ॥ 15 ॥**
ಪದವಿಭಾಗ-ಅರ್ಥ:ಎಂದಡೆ+ ಅಬ್ಬರಿಸಿದನು ತಾ ಕಲಿಯೆಂದು ಬಗೆದನು, ಮೀಸೆಯನು ಬೆರಳಿಂದ ತಿರುಹುತ ಮುಗುಳುನಗೆ ಹರುಷದಲಿ ಮೈಮರೆದ ಸಂದಣಿಸಿ ರೋಮಾಂಚ ಕೆಲಬಲದ+ ಇಂದುಮುಖಿಯರ ನೋಡಿದನು ನಲವಿಂದ ನುಡಿದನು ತನ್ನ ಪೌರುಷತನದ ಪರಿಣತೆಯ.

ಎಂದಡೆ+ ಅಬ್ಬರಿಸಿದನು ತಾ ಕಲಿಯೆಂದು ಬಗೆದನು= ಗೋವಳನು ಇವನನ್ನು ಹೊಗಳಲು, ತಾನು ವೀರನೆಂದು ಭಾವಿಸಿದನು.// ಮೀಸೆಯನು ಬೆರಳಿಂದ ತಿರುಹುತ ಮುಗುಳುನಗೆ ಹರುಷದಲಿ ಮೈಮರೆದ ಸಂದಣಿಸಿ ರೋಮಾಂಚ= ಮೀಸೆಯನ್ನು ಬೆರಳಿನಿಂದದ ತಿರುಹುತ್ತಾ, ಮುಗುಳುನಗೆ ಸೂಸುತ್ತಾ, ಹರ್ಷದಿಂದ ಉಬ್ಬಿ ಮೈಮರೆತು, ಅವನ ದೇಹದಲ್ಲಿ ರೋಮಾಂಚನವು ಸಂದಣಿಸಲು,// ಕೆಲಬಲದ+ ಇಂದುಮುಖಿಯರ ನೋಡಿದನು= ತನ್ನ ಆಚೀ ಈಚೆ ಸುತ್ತಲೂ ಇದ್ದ ಅಂದದ ಹೆಂಗೆಳೆಯರನ್ನು ನೋಡಿದನು. ನಲವಿಂದ ನುಡಿದನು ತನ್ನ ಪೌರುಷತನದ ಪರಿಣತೆಯ= ಅವರ ಎದುರಲ್ಲಿ ಆನಂದದಿಂದ. ತನ್ನ ಪೌರುಷತನದ ಪರಿಣತೆಯನ್ನು ಹೇಳಿದನು.

ಅರ್ಥ:ಗೋವಳನು ಇವನನ್ನು ಹೊಗಳಲು, ಉತ್ತರನು ತಾನು ವೀರನೆಂದು ಭಾವಿಸಿದನು. ಮೀಸೆಯನ್ನು ಬೆರಳಿನಿಂದದ ತಿರುಹುತ್ತಾ, ಮುಗುಳುನಗೆ ಸೂಸುತ್ತಾ, ಹರ್ಷದಿಂದ ಉಬ್ಬಿ ಮೈಮರೆತು, ಅವನ ದೇಹದಲ್ಲಿ ರೋಮಾಂಚನವು ಸಂದಣಿಸಲು, ತನ್ನ ಆಚೀ ಈಚೆ ಸುತ್ತಲೂ ಇದ್ದ ಅಂದದ ಹೆಂಗೆಳೆಯರನ್ನು ನೋಡಿದನು. ಅವರ ಎದುರಲ್ಲಿ ಆನಂದದಿಂದ ತನ್ನ ಪೌರುಷತನದ ಪರಿಣತೆಯನ್ನು ಹೇಳಿದನು.

**ಜವನ ಮೀಸೆಯ ಮುರಿದನೋ ಭೈ**
**ರವನ ದಾಡೆಯನಲುಗಿದನೊ ಮೃ**
**ತ್ಯುವಿನ ಮೇಲುದ ಸೆಳೆದನೋ ಕೇಸರಿಯ ಕೆಣಕಿದನೊ ।**
**ಬವರವನು ತೊಡಗಿದನಲಾ ಕೌ**
**ರವನಕಟ ಮರುಳಾದನೆಂದಾ**
**ಯುವತಿಯರ ಮೊಗ ನೋಡುತುತ್ತರ ಬಿರುದ ಕೆದರಿದನು ॥ 19 ॥**

ಪದವಿಭಾಗ-ಅರ್ಥ:ಜವನ ಮೀಸೆಯ ಮುರಿದನೋ, ಭೈರವನ ದಾಡೆಯನು+ ಅಲುಗಿದನೊ, ಮೃತ್ಯುವಿನ ಮೇಲುದ ಸೆಳೆದನೋ, ಕೇಸರಿಯ ಕೆಣಕಿದನೊ, ಬವರವನು ತೊಡಗಿದನಲಾ ಕೌರವನು+ ಅಕಟ ಮರುಳಾದನು+ ಎಂದು ಆ ಯುವತಿಯರ ಮೊಗ ನೋಡುತ+ ಉತ್ತರ ಬಿರುದ ಕೆದರಿದನು

ಜವನ ಮೀಸೆಯ ಮುರಿದನೋ= ಯಮನ ಮೀಸೆಯನ್ನು ತಿರುಚಿದಂತೆ ಆಗಿದೆ, ಭೈರವನ ದಾಡೆಯನಲುಗಿದನೊ= ಕಾಲಭಯರವನ ಕೋರೆದಾಡೆಯನ್ನು ಅಲುಗಾಡಿಸಿದಂತಾಗಿದೆ, ಮೃತ್ಯುವಿನ ಮೇಲುದ ಸೆಳೆದನೋ= ಮಲಗಿದ್ದ ಮೃತ್ಯುವಿನ ಮುಸುಕನ್ನು ತೆಗೆದು ಕರೆದಂತಾಗಿದೆ, ಕೇಸರಿಯ ಕೆಣಕಿದನೊ= ಸಿಂಹವನ್ನು ಕೆನಕಿದಂತಾಗಿದೆ, ಬವರವನು ತೊಡಗಿದನಲಾ ಕೌರವನು+= ಯುದ್ಧವನ್ನು ಆರಂಬಿದ್ದಾನಲ್ಲಅ ಈ ಕೌರವನು; ಅಕಟ ಮರುಳಾದನು+ ಎಂದು ಆ ಯುವತಿಯರ ಮೊಗ ನೋಡುತ+ ಉತ್ತರ ಬಿರುದ ಕೆದರಿದನು= ತನ್ನನ್ನು ಕೆಣಕಿ ಮರುಳಾದನು, ಮೂರ್ಖ ಕೆಲಸ ಮಾಡಿದನು, ಹುಚ್ಚುಕೆಲಸ ಮಾಡಿದನು, ಎಂದು ಆ ಯುವತಿಯರ ಮುಖವನ್ನು ನೋಡುತ್ತಾ ಉತ್ತರನು ತನ್ನ ಪೌರುಷವನ್ನು ಕೊಚ್ಚಿಕೊಂಡನು.

ಅರ್ಥ:ಕೌರವನು ತನ್ನ ಮೇಲೆ ಯುದ್ಧಕ್ಕೆ ಬಂದಿರುವುದು, ಯಮನ ಮೀಸೆಯನ್ನು ತಿರುಚಿದಂತೆ ಆಗಿದೆ, ಕಾಲಭಯರವನ ಕೋರೆದಾಡೆಯನ್ನು ಅಲುಗಾಡಿಸಿ ಕೆಣಕಿದಂತಾಗಿದೆ, ಮಲಗಿದ್ದ ಮೃತ್ಯುವಿನ ಮುಸುಕನ್ನು ತೆಗೆದು ಕರೆದಂತಾಗಿದೆ,ಮಲಗಿದ್ದ ಸಿಂಹವನ್ನು ಕೆನಕಿದಂತಾಗಿದೆ, ಈ ಕೌರವನು ಯುದ್ಧವನ್ನು ಆರಂಬಿದ್ದಾನಲ್ಲಾ , ತನ್ನನ್ನು ಕೆಣಕಿ ಮೂರ್ಖ ಕೆಲಸ ಮಾಡಿದನು, ಎಂದು ಆ ಯುವತಿಯರ ಮುಖವನ್ನು ನೋಡುತ್ತಾ ಉತ್ತರನು ತನ್ನ ಪೌರುಷವನ್ನು ಕೊಚ್ಚಿಕೊಂಡನು.

**ಆರೊಡನೆ ಕಾದುವೆನು ಕೆಲಬರು**
**ಹಾರುವರು ಕೆಲರಂತಕನ ನೆರೆ**
**ಯೂರವರು ಕೆಲರಧಮ ಕುಲದಲಿ ಸಂದು ಬಂದವರು ॥**
**ವೀರರೆಂಬವರಿವರು ಮೇಲಿ**
**ನ್ನಾರ ಹೆಸರುಂಟವರೊಳೆಂದು ಕು**
**ಮಾರ ನೆಣಗೊಬ್ಬಿನಲಿ ನುಡಿದನು ಹೆಂಗಳಿದುರಿನಲಿ ॥ 20 ॥**

ಪದವಿಭಾಗ-ಅರ್ಥ:ಆರೊಡನೆ- ಆರ+ಒಡನೆ ಕಾದುವೆನು ಕೆಲಬರು ಹಾರುವರು ಕೆಲರು+ ಆಂತಕನ ನೆರೆಯೂರವರು ಕೆಲರು+ ಅಧಮ ಕುಲದಲಿ ಸಂದು ಬಂದವರು ವೀರರೆಂಬವರು+ ಇವರು ಮೇಲೆ+ ಇನ್ನಾರ ಹೆಸರುಂಟು+ ಅವರೊಳು+ ಎಂದು ಕುಮಾರ ನೆಣಗೊಬ್ಬಿನಲಿ ನುಡಿದನು ಹೆಂಗಳ+ ಇದುರಿನಲಿ

ಆರೊಡನೆ- ಆರ+ಒಡನೆ ಕಾದುವೆನು= ಯಾರೆಡನೆ ಯುದ್ಧಮಾಡಲಿ, ಕೆಲಬರು ಹಾರುವರು= ಕೆಲವರು ಬ್ರಾಹ್ಮಣರು – ಕೊಲ್ಲುವಂತಿಲ್ಲ (ದ್ರೋಣ ಅಸ್ವತ್ಥಾಮ, ಕೃಪ); ಕೆಲರು+ ಆಂತಕನ ನೆರೆಯೂರವರು= ಅದರಲ್ಲಕೆಲವರು ಮುಪ್ಪಿನ ಮುದುಕರು, ಅಂತಕನ- ಯಮನ ಊರಿನ ಪಕ್ಕದ ಊರಿಗೆ ಆಗಲೇ ಹೋಗಿದ್ದಾರೆ. (ಮುಟ್ಟಿದರೆ ಸಾಯುವರು – ಭೀಷ್ಮ ವಿದುರರು ಮುದುಕರು) ಕೆಲರು+ ಅಧಮ ಕುಲದಲಿ ಸಂದು ಬಂದವರು= ಕೆಲವರು ಕ್ಷತ್ರಿಯರೊಡನೆ ಯುದ್ಧಮಅಡಲು ಯೋಗ್ಯರಲ್ಲದ ಕುಲದವರು (ಕರ್ಣ); ವೀರರೆಂಬವರು+ ಇವರು ಮೇಲೆ+ ಇನ್ನಾರ ಹೆಸರುಂಟು+ ಅವರೊಳು+ = ಇವರೇ ಆ ಕೌರವನಸೈನ್ಯದಲ್ಲಿ ವೀರರು ಎಂದು ಬೀಗುವವರು! ಇವರಲ್ಲಿ ತನಗೆ ಸಮಾನರಾದ ವಿರರೇ ಇಲ್ಲ, ಯಾರೊಡನೆ ಯುದ್ಧಮಾಡಲಿ, ಎಂದು ಕುಮಾರ, ನೆಣಗೊಬ್ಬಿನಲಿ ನುಡಿದನು ಹೆಂಗಳ+ ಇದುರಿನಲಿ= ಹೀಗೆ ನೆಣದ ಕೊಬ್ಬು- ಮಾಂಸದ ಕೊಬ್ಬುನಿಂದ ಹೆಂಗಸರ ಎದುರಿನಲ್ಲಿ ಉತ್ತರಕುಮಾರ ಹೇಳಿದ.

ಅರ್ಥ:ಯಾರೊಡನೆ ಯುದ್ಧಮಾಡಲಿ, ಕೆಲವರು ಬ್ರಾಹ್ಮಣರು – ಕೊಲ್ಲುವಂತಿಲ್ಲ; ಅದರಲ್ಲಿ ಕೆಲವರು ಮುಪ್ಪಿನ ಮುದುಕರು, ಯಮನ ಊರಿನ ಪಕ್ಕದ ಊರಿಗೆ ಆಗಲೇ ಹೋಗಿದ್ದಾರೆ. ಮುಟ್ಟಿದರೆ ಸಾಯುವರು ಕೆಲವರು ಕ್ಷತ್ರಿಯರೊಡನೆ ಯುದ್ಧಮಅಡಲು

ಯೋಗ್ಯರಲ್ಲದ ಕುಲದವರು; ಇವರೇ ಆ ಕೌರವನ ಸೈನ್ಯದಲ್ಲಿ ವೀರರು ಎಂದು ಬೀಗುವವರು! ಇನ್ನಾರಿದ್ದಾರೆ? ಇವರಲ್ಲಿ ತನಗೆ ಸಮಾನರಾದ ವಿರರೇ ಇಲ್ಲ, ಯಾರೊಡನೆ ಯುದ್ಧಮಾಡಲಿ, ಎಂದು ಕುಮಾರ, ಹೀಗೆ ಮಾಂಸದ ಕೊಬ್ಬಿನಿಂದ ಹೆಂಗಸರ ಎದುರಿನಲ್ಲಿ ಉತ್ತರಕುಮಾರ ಹೇಳಿದ.

**ನುಡಿದು ಫಲವೇನಿನ್ನು ಸಾರಥಿ**
**ಮಡಿದ ನಿನ್ನಿನ ಬವರದಲಿ ತಾ**
**ನುಡುಹನಾದೆನು ಶಿವ ಶಿವಾಯಿಂದೆನ್ನ ಕೈ ಮನಕೆ ।**
**ಗಡಣಿಸುವ ಸಾರಥಿಯನೊಬ್ಬನ**
**ಪಡೆದನಾದೊಡೆ ಕೌರವೇಂದ್ರನ**
**ಪಡೆಗೆ ಹಬ್ಬವ ಮಾಡುವೆನು ತೋರುವೆನು ಕೈಗುಣವ ॥ 24 ॥**
ಪದವಿಭಾಗ-ಅರ್ಥ:ನುಡಿದು ಫಲವೇನು+ ಇನ್ನು, ಸಾರಥಿ ಮಡಿದ ನಿನ್ನಿನ ಬವರದಲಿ, ತಾನು+ ಉಡುಹನಾದೆನು ಶಿವ ಶಿವಾ+ ಯಿಂದು+ ಎನ್ನ ಕೈ ಮನಕೆ ಗಡಣಿಸುವ ಸಾರಥಿಯನು+ ಒಬ್ಬನ ಪಡೆದನಾದೊಡೆ ಕೌರವೇಂದ್ರನ ಪಡೆಗೆ ಹಬ್ಬವ ಮಾಡುವೆನು ತೋರುವೆನು ಕೈಗುಣವ.

ನುಡಿದು ಫಲವೇನು+ ಇನ್ನು= ಹೆಚ್ಚು ಮಾತನಾಡಿ ಏನು ಫಲ?, ಸಾರಥಿ ಮಡಿದ ನಿನ್ನಿನ ಬವರದಲಿ,= ನಿನ್ನೆಯ ಯುದ್ಧದಲ್ಲಿ ತನ್ನ ಸಾರಥಿ ಸತ್ತನು- ಮಡಿದುಹೋದನು. ತಾನು+ ಉಡುಹನಾದೆನು (ಉಡುಹ-> ಉಡುಪ - ಕೈಕಾಲುಗಳಿಲ್ಲದ ಅಂಗಹೀನ)= ಈಗ ತಾನು ಕೈಯಿಲ್ಲದಂತಾದೆನು. ಶಿವ ಶಿವಾ+ ಯಿಂದು+ ಎನ್ನ ಕೈ ಮನಕೆ ಗಡಣಿಸುವ ಸಾರಥಿಯನು+ ಒಬ್ಬನ ಪಡೆದನಾದೊಡೆ= ದೇವರೇ, ನನ್ನ ಕೈಗೆ, ಮನಸ್ಸಿಗೆ ಗಡಣಿಸುವ- ಸೇರುವ ಹೊಂದುವ, ಒಪ್ಪುವ ಸಾರಥಿಯನು+ ಒಬ್ಬನ - ಒಬ್ಬನನ್ನು ಪಡೆದನಾದೊಡೆ, ಕೌರವೇಂದ್ರನ ಪಡೆಗೆ- ಸೈನ್ಯಕ್ಕೆ, ಹಬ್ಬವ ಮಾಡುವೆನು ತೋರುವೆನು (ತನ್ನ) ಕೈಗುಣವ.(ಹಬ್ಬ ಎಂದರೆ ಸಂತಸದಿಂದ ಗಲಾಟೆ- ಕೂಗಾಡುವುದು, ವ್ಯಂಗವಾಗಿ- ಬಾಯಿ ಬಡಿದುಕೊಂಡು ಗೋಳಾಡುವುದು- ಕಷ್ಟಕ್ಕೆ ಸಿಲುಕುವುದು)

ಅರ್ಥ:ಉತ್ತರನು ಹೇಳಿದ, ಹೆಚ್ಚು ಮಾತನಾಡಿ ಏನು ಫಲ?, ನಿನ್ನೆಯ ಯುದ್ಧದಲ್ಲಿ ತನ್ನ ಸಾರಥಿ ಸತ್ತನು. ಈಗ ತಾನು ಕೈಯಿಲ್ಲದವನಂತಾದನು ಎಂದನು. 'ದೇವರೇ, ನನ್ನ ಕೈಗೆ, ಮನಸ್ಸಿಗೆ ಹೊಂದುವ ಸಾರಥಿ ಒಬ್ಬನನ್ನು ಪಡೆದದ್ದೇ ಆದರೆ, ಕೌರವೇಂದ್ರನ ಸೈನ್ಯಕ್ಕೆ ಹಬ್ಬವನ್ನು ಮಾಡುವೆನು, ನನ್ನ ಕೈಗುಣವನ್ನು ತೋರುವೆನು.' ಎಂದನು ಉತ್ತರ.

**ಕೇಳಿದನು ಕಲಿಪಾರ್ಥನೀತನ**
**ಬಾಲ ಭಾಷೆಗಳೆಲ್ಲವನು ಪಾಂ**
**ಚಾಲೆಗೆಕ್ಕಟಿ ನುಡಿದ ನಾವಿನ್ನಿಹುದು ಮತವಲ್ಲ ।**
**ಕಾಲ ಸವೆದುದು ನಮ್ಮ ರಾಜ್ಯದ**
**ಮೇಲೆ ನಿಲುಕಲು ಬೇಕು ಕೌರವ**
**ರಾಳು ನಮಗೋಸುಗವೆ ಬಂದುದು ಕಾಂತೆ ಕೇಳೆಂದ ॥ 26 ॥**
ಪದವಿಭಾಗ-ಅರ್ಥ:ಕೇಳಿದನು ಕಲಿಪಾರ್ಥನು+ ಈತನ ಬಾಲ ಭಾಷೆಗಳೆಲ್ಲವನು ಪಾಂಚಾಲೆಗೆ+ ಎಕ್ಕಟಿ ನುಡಿದ ನಾವು+ ಇನ್ನು+ ಇಹುದು ಮತವಲ್ಲ ಕಾಲ ಸವೆದುದು ನಮ್ಮ ರಾಜ್ಯದ ಮೇಲೆ ನಿಲುಕಲು ಬೇಕು ಕೌರವರ+ ಆಳು ನಮಗೋಸುಗವೆ ಬಂದುದು ಕಾಂತೆ ಕೇಳೆಂದ.

ಕಲಿಪಾರ್ಥನು+ ಈತನ ಬಾಲ ಭಾಷೆಗಳೆಲ್ಲವನು= ಕಲಿಪಾರ್ಥನು- ವೀರನಾದ ಅರ್ಜುನನು+ ಈತನ- ಉತ್ತರನ ತಿಳುವಳಿಕೆ ಇಲ್ಲದ ಬಾಲ ಭಾಷೆಗಳೆಲ್ಲವನ್ನೂ ಕೇಳಿದನು .// ಪಾಂಚಾಲೆಗೆ+ ಎಕ್ಕಟಿ ನುಡಿದ ನಾವು+ ಇನ್ನು+ ಇಹುದು ಮತವಲ್ಲ= ಪಾಂಚಾಲೆ ದ್ರೌಪದಿಗೆ+ ಎಕ್ಕಟಿ- ಪ್ರತ್ಯೇಕವಾಗಿ ಕರೆದು ನುಡಿದ- ಹೇಳಿದನು. ನಾವು+ ಇನ್ನು+ ಇಹುದು ಮತವಲ್ಲ- ಇನ್ನು ಸುಮ್ಮನಿರುವುದು, ತಟಸ್ಥವಾಗಿರುವುದು ಯೋಗ್ಯವಾದ ಕ್ರಮವಲ್ಲ, ಸರಿಯಲ್ಲ.// ಕಾಲ ಸವೆದುದು= ನಮ್ಮ ಹದಿಮೂರು ವರ್ಷದ ಅವಧಿ ಮುಗಿಯಿತು. ನಮ್ಮ ರಾಜ್ಯದ ಮೇಲೆ ನಿಲುಕಲು- ಕೈಹಾಕಬೇಕು, -ತಲುಪುವ ಪ್ರಯತ್ನ ಮಾಡಬೇಕು. ಕೌರವರ+ ಆಳು- ಸೈನ್ಯ, ನಮಗೋಸುಗವೆ- ನಮ್ಮನ್ನು ಹುಡುಕಲಾಗಿಯೇ ಬಂದಿದೆ- ಬಂದುದು, ಕಾಂತೆ ಕೇಳು+ ಎಂದ.

ಅರ್ಥ:ವೀರನಾದ ಅರ್ಜುನನು ಉತ್ತರನ ತಿಳುವಳಿಕೆ ಇಲ್ಲದ ಬಾಲ ಭಾಷೆಗಳೆಲ್ಲವನ್ನೂ ಕೇಳಿದನು. ಪಾಂಚಾಲೆ ದ್ರೌಪದಿಗೆ ಪ್ರತ್ಯೇಕವಾಗಿ ಕರೆದು ಹೇಳಿದನು. ನಾವು ಇನ್ನು ಸುಮ್ಮನಿರುವುದು ಯೋಗ್ಯವಾದ ಕ್ರಮವಲ್ಲ. ನಮ್ಮ ಹದಿಮೂರು ವರ್ಷದ ಅವಧಿ ಮುಗಿಯಿತು. ನಮ್ಮ ರಾಜ್ಯದ ಮೇಲೆ ಕೈಹಾಕಬೇಕು. ಕೌರವರ ಸೈನ್ಯ ನಮ್ಮನ್ನು ಹುಡುಕಲಾಗಿಯೇ ಬಂದಿದೆ, ಕಾಂತೆ ಕೇಳು, ಎಂದ.

**ನರನ ಸಾರಥಿಯೆಂದು ನೀನು**
**ತ್ತರೆಗೆ ಸೂಚಿಸಿ ತನ್ನನೀಗಳೆ**
**ಕರೆಸೆನಲು ಕೈಕೊಂಡು ದುರುಪದಿ ಬಂದಳೊಲವಿನಲಿ ।**
**ತರುಣಿ ಕೇಳರ್ಜುನನ ಸಾರಥಿ**
**ವರ ಬೃಹನ್ನಳೆ ಖಾಂಡವಾಗ್ನಿಯ**
**ಹೊರೆದನಿವ ತಾನೆಂದು ಸತಿಯುತ್ತರೆಗೆ ಹೇಳಿದಳು ॥ 27 ॥**
ಪದವಿಭಾಗ-ಅರ್ಥ:ನರನ ಸಾರಥಿಯೆಂದು ನೀನು+ ಉತ್ತರೆಗೆ ಸೂಚಿಸಿ ತನ್ನನು+ ಈಗಳೆ ಕರೆಸು+ ಎನಲು ಕೈಕೊಂಡು ದುರುಪದಿ ಬಂದಳು+ ಒಲವಿನಲಿ ತರುಣಿ ಕೇಳು+ ಅರ್ಜುನನ ಸಾರಥಿ ವರ ಬೃಹನ್ನಳೆ ಖಾಂಡವಾಗ್ನಿಯ ಹೊರೆದನು+ ಇವ ತಾನು+ ಎಂದು ಸತಿಯು+ ಉತ್ತರೆಗೆ ಹೇಳಿದಳು.

ನರನ ಸಾರಥಿಯೆಂದು ನೀನು+ ಉತ್ತರೆಗೆ ಸೂಚಿಸಿ ತನ್ನನು+ ಈಗಳೆ ಕರೆಸು+ ಎನಲು= ಬೃಹನ್ನಳೆಯು ಹಿಂದೆ ನರನ- ಅರ್ಜುನನ, ಸಾರಥಿಯೆಂದು ನೀನು+ ಉತ್ತರೆಗೆ- ಉತ್ತರಕುಮಾರನ ತಂಗಿ ಉತ್ತರೆಗೆ ಸೂಚಿಸಿ- ಹೇಳಿ, ತನ್ನನು (ಅರ್ಜುನನ್ನು)+ ಈಗಳೆ ಕರೆಸು+ ಎನಲು- ಎಂದು ದ್ರೌಪದಿಗೆ ಹೇಳಲು,//ಕೈಕೊಂಡು- ಆ ಮಾತನ್ನು ಅನುಸರಿಸಿ, ದುರುಪದಿ ಬಂದಳು+ ಒಲವಿನಲಿ- ದ್ರೌಪದಿ ಸಂತಸದಿಂದ ಉತ್ತರೆಯ ಬಳಿಗೆ ಬಂದಳು;// ತರುಣಿ ಕೇಳು+ ಅರ್ಜುನನ ಸಾರಥಿ ವರ ಬೃಹನ್ನಳೆ ಖಾಂಡವಾಗ್ನಿಯ ಹೊರೆದನು+ ಇವ ತಾನು+ ಎಂದು ಸತಿಯು+ ಉತ್ತರೆಗೆ ಹೇಳಿದಳು= ತರುಣಿ- ಉತ್ತರೆಯೇ ಕೇಳು+ ವರ- ಶ್ರೇಷ್ಠನಾದ ಈ ಬೃಹನ್ನಳೆಯು ಅರ್ಜುನನ ಸಾರಥಿಯಾಗಿದ್ದನು, ಅವನು ಖಾಂಡವಾಗ್ನಿಯ- ಖಾಂಡವವನವನ್ನು ಅಗ್ನಿಯು ಸುಡುವಾಗ ಹೊರೆದನು- ಅರ್ಜುನನ ಸಾರಥ್ಯದ, ಇವ ತಾನು+- ಇವನು - ಬೃಹನ್ನಳೆಯು ಆ ಹೊರೆಯನ್ನು ವಹಿಸಿದ್ದನು+ ಎಂದು ಸತಿಯು- ದ್ರೌಪದಿಯು+ ಉತ್ತರೆಗೆ ಹೇಳಿದಳು.

ಅರ್ಥ:ಬೃಹನ್ನಳೆಯು ಹಿಂದೆ ಅರ್ಜುನನ ಸಾರಥಿಯಾಗಿದ್ದನೆಂದು ನೀನು ಉತ್ತರಕುಮಾರನ ತಂಗಿ ಉತ್ತರೆಗೆ ಸೂಚಿಸಿ ಹೇಳಿ, ತನ್ನನ್ನು (ಅರ್ಜುನನ್ನು) ಈಗಲೆ ಕರೆಸು ಎಂದು ಅರ್ಜುನನು ದ್ರೌಪದಿಗೆ ಹೇಳಲು, ಆ ಮಾತನ್ನು ಅನುಸರಿಸಿ, ದ್ರೌಪದಿ ಸಂತಸದಿಂದ ಉತ್ತರೆಯ ಬಳಿಗೆ ಬಂದಳು; ಉತ್ತರೆಯೇ ಕೇಳು 'ಶ್ರೇಷ್ಠನಾದ ಈ ಬೃಹನ್ನಳೆಯು ಅರ್ಜುನನ ಸಾರಥಿಯಾಗಿದ್ದನು, ಅವನು ಖಾಂಡವ ವನವನ್ನು ಅಗ್ನಿಯು ಸುಡುವಾಗ ಅರ್ಜುನನ ಸಾರಥ್ಯವನ್ನು ವಹಿಸಿದ್ದನು, ಎಂದು ದ್ರೌಪದಿಯು ಉತ್ತರೆಗೆ ಹೇಳಿದಳು.

## ಕೌರವನ ಸೇನಾ ಸಾಗರ ಕಂಡ ಉತ್ತರಕುಮಾರನಿಗೆ ದಿಗ್ಭ್ರಮೆ

**ಎಲೆ ಪರೀಕ್ಷಿತ ತನಯ ಕೇಳ್ ನೃಪ**
**ತಿಲಕನತಿ ವೇಗದಲಿ ರಥವನು**
**ಕೊಳುಗುಳಕೆ ತರೆ ಕಂಡನುತ್ತರ ಮುಂದೆ ದೂರದಲಿ ।**
**ತಳಿತ ಕುಂತದ ಬಾಯಿ ಧಾರೆಯ**
**ಹೊಳವುಗಳ ಹೊದರೆದ್ದ ಸಿಂಧದ**
**ಸೆಳೆಯ ಸೀಗುರಿಗಳ ಸುರಂಭದ ಸಕಲ ಮೋಹರವ ॥ 1 ॥**
ಪದವಿಭಾಗ-ಅರ್ಥ: ಎಲೆ ಪರೀಕ್ಷಿತ ತನಯ ಕೇಳ್ ನೃಪತಿಲಕನು+ ಅತಿ ವೇಗದಲಿ ರಥವನು ಕೊಳುಗುಳಕೆ ತರೆ, ಕಂಡನು+ ಉತ್ತರ ಮುಂದೆ ದೂರದಲಿ ತಳಿತ ಕುಂತದ ಬಾಯಿ ಧಾರೆಯ ಹೊಳವುಗಳ ಹೊದರಿ+ ಎದ್ದ ಸಿಂಧದ ಸೆಳೆಯ ಸೀಗುರಿಗಳ ಸುರಂಭದ ಸಕಲ ಮೋಹರವ

ಎಲೆ ಪರೀಕ್ಷಿತ ತನಯ- ಜನಮೇಜಯನೇ, ಕೇಳ್ ನೃಪತಿಲಕನು- (ಅರ್ಜುನನು)+ ಅತಿ ವೇಗದಲಿ ರಥವನು ಕೊಳುಗುಳಕೆ- ರಣರಂಗದ ಹತ್ತಿರ, ತರೆ- ತರಲು, ಕಂಡನು+ ಉತ್ತರ ಮುಂದೆ ದೂರದಲಿ ತಳಿತ= (ಚಿಗುರಿದ) ಎತ್ತಿ ಹಿಡಿದ ಕುಂತದ- ಕತ್ತಿ, ಈಟಿಗಳ, ಬಾಯಿ ಧಾರೆಯ ಹೊಳವುಗಳ- ಹೊಳಪುಗಳನ್ನು, ಹೊದರೆದ್ದ- ಗುಚ್ಚವಾಗಿ ಎತ್ತಿ ಹಿಡಿದಿರುವ,ಸಿಂಧದ ಸೆಳೆಯ=

ವಿಧವಿಧವಾದ ಬಣ್ಣಗಳಿಂದ ಕೂಡಿದ ವಸ್ತು, ಚಿತ್ರದ ಪತಾಕೆಗಳನ್ನೂ, ಸೀಗುರಿಗಳ– ಚಾಮರಗಳನ್ನೂ, ಬಾವುಟಗಳನ್ನೂ, ಸುರಂಭದ ಸಕಲ ಮೋಹರವ= ಸಿದ್ಧವಾದ ಸಕಲ ಸೈನ್ಯವನ್ನೂ, ಉತ್ತರ ಮುಂದೆ ದೂರದಲ್ಲಿ ಕಂಡನು.

ಹೊದರು= ಗುಚ್ಛ; ಪೊದೆ; ಕುಂತ= ಒಂದು ಬಗೆಯ ಆಯುಧ.; ಸಿಂಧ= ವಿಧವಿಧವಾದ ಬಣ್ಣಗಳಿಂದ ಕೂಡಿದ ವಸ್ತು, ಚಿತ್ರದ ಪತಾಕೆ

ಅರ್ಥ: ಎಲೆ ಜನಮೇಜಯನೇ, ಕೇಳು, ಅರ್ಜುನನು ಅತಿ ವೇಗದಿಂದ ರಥವನ್ನು ರಣರಂಗದ ಹತ್ತಿರ ತರಲು, ಉತ್ತರನು ಮುಂದೆ ದೂರದಲ್ಲಿ, ಎತ್ತಿ ಹಿಡಿದ ಕತ್ತಿ, ಈಟಿಗಳ, ಬಾಯಿ ಧಾರೆಯ ಹೊಳಪುಗಳನ್ನು ಗುಂಪಾಗಿ ಎತ್ತಿ ಹಿಡಿದಿರುವಾಯುಧಗಳನ್ನೂ, ವಿಧವಿಧವಾದ ಬಣ್ಣಗಳಿಂದ ಕೂಡಿದ ಚಿತ್ರದ ಪತಾಕೆಗಳನ್ನೂ, ಚಾಮರಗಳನ್ನೂ, ಸಿದ್ಧವಾಗಿ ನಿಂತಿರುವ ಸಕಲ ಸೈನ್ಯವನ್ನೂ, ಮುಂದೆ ದೂರದಲ್ಲಿ ಕಂಡನು.

**ಕಾಲಕೂಟದ ತೊರೆಯೊ ಮಾರಿಯ**
**ಗೂಳೆಯವೊ ಮೃತ್ಯುವಿನ ಗಂಟಲ**
**ತಾಳಿಗೆಯೊ ಭೈರವನ ಥಟ್ಟೋ ಜವನ ಜಂಗುಳಿಯೊ ।**
**ಕಾಲರುದ್ರನ ನೊಸಲ ವಹ್ನಿ**
**ಜ್ವಾಲೆಯೋ ಕೌರವನ ಸೇನಾ**
**ಜಾಲವೋ ಶಿವಯೆನುತ ಹೆದರಿದನಂದು ಸುಕುಮಾರ ॥ 5 ॥**
ಪದವಿಭಾಗ–ಅರ್ಥ: ಕಾಲಕೂಟದ– (ವಿಷ) ತೊರೆಯೊ, ಮಾರಿಯ ಗೂಳೆಯವೊ(ಗುಂಪು), ಮೃತ್ಯುವಿನ ಗಂಟಲತಾಳಿಗೆಯೊ, ಭೈರವನ ಥಟ್ಟೋ, ಜವನ ಜಂಗುಳಿಯೊ, ಕಾಲರುದ್ರನ ನೊಸಲ ವಹ್ನಿಜ್ವಾಲೆಯೋ, ಕೌರವನ ಸೇನಾಜಾಲವೋ, ಶಿವಯೆನುತ ಹೆದರಿದನು+ ಆಂದು ಸುಕುಮಾರ

ಅರ್ಥ: ಇದೇನು ಸೈನ್ಯವೋ ಅಥವಾ ಕಾಲಕೂಟ ವಿಷದ ನದಿಯೋ! ನರಭಕ್ಷಕ ಮಾರಿಯ ಗುಂಪೋ!, ಎಲ್ಲವನ್ನೂ ನುಂಗುವ ಮೃತ್ಯುವಿನ ಗಂಟಲತಾಳಿಗೆಯೊ! ಅನೇಕ ಭೈರವರ ದಂಡೋ!, ಯಮನ ಗುಂಪೋ!, ಪ್ರಳಯಕಾಲದಲ್ಲಿ ರುದ್ರನು ಬಿಡುವ ಹಣೆಗಣ್ಣಿನ ಬೆಂಕಿಯ ಜ್ವಾಲೆಯೋ!, ಅಥವಾ ನಿಜವಾಗಿ ಇದು ಕೌರವನ ಸೇನಾಜಾಲವೋ ಸೇನಾಸಮೂಹವೋ!, ಶಿವ– ಶಿವಾ! ಇದೇನು ಸೈನ್ಯ ಎಂದು ಅರಮನೆಯಲ್ಲಿ ಸುಖವಾಗಿ ಬೆಳೆದ ಸುಕುಮಾರ ಉತ್ತರನು ಅಂದು ಹೆದರಿ ಹೌಹಾರಿದನು.

### ಉತ್ತರಕುಮಾರನ – ಯುದ್ಧ ನಿರಾಕರಣೆ

**ಹಸಿದ ಮಾರಿಯ ಮಂದೆಯಲಿ ಕುರಿ**
**ನುಸುಳಿದಂತಾದೆನು ಬೃಹನ್ನಳೆ**
**ಯೆಸಗದಿರು ತೇಜಿಗಳ ತಡೆ ಚಿಮ್ಮಟಿಗೆಯನು ಬಿಸುಡು ।**
**ಮಿಸುಕಬಾರದು ಪ್ರಳಯ ಕಾಲನ**
**ಮುಸುಕನುಗಿವವನಾರು ಕೌರವ**
**ನಸಮಬಲನೈ ರಥವ ಮರಳಿಚು ಜಾಳಿಸುವೆನೆಂದ ॥ 7 ॥**
ಪದವಿಭಾಗ–ಅರ್ಥ: ಹಸಿದ ಮಾರಿಯ ಮಂದೆಯಲಿ ಕುರಿನುಸುಳಿದಂತೆ+ ಆದೆನು ಬೃಹನ್ನಳೆ+ ಯೆಸಗದಿರು ತೇಜಿಗಳ ತಡೆ ಚಿಮ್ಮಟಿಗೆಯನು ಬಿಸುಡು ಮಿಸುಕಬಾರದು ಪ್ರಳಯ ಕಾಲನ ಮುಸುಕನು+ ಉಗಿವವನು+ ಆರು, ಕೌರವನು+ ಅಸಮ ಬಲನೈ ರಥವ ಮರಳಿಚು ಜಾಳಿಸುವೆನು+ ಎಂದ.

ಹಸಿದ ಮಾರಿಯ ಮಂದೆಯಲಿ ಕುರಿನುಸುಳಿದಂತೆ+ ಆದೆನು= ಹಸಿದಿರುವ ಮಾರಿ ಒಬ್ಬಳಲ್ಲ– ಅನೇಕ ಹಸಿದ ಮಾರಿಗಳ ಮಧ್ಯೆ ನಾನು ಕುರಿಯಂತೆ ನುಗ್ಗಿದ ಹಾಗಾಯಿತು. ಬೃಹನ್ನಳೆ+ ಯೆಸಗದಿರು ತೇಜಿಗಳ ತಡೆ ಚಿಮ್ಮಟಿಗೆಯನು ಬಿಸುಡು, ಮಿಸುಕಬಾರದು= ಬೃಹನ್ನಳೆ ಕುದುರೆಗಳನ್ನು ಓಡಿಸಬೇಡ; ಕುದುರೆಗಳನ್ನು ತಡೆದು ನಿಲ್ಲಿಸು. ಚಿಮ್ಮಟಿಗೆಯನು ಬಿಸುಡು– ಎಸೆದುಬಿಡು! ಒಂದು ಹೆಜ್ಜೆಯನ್ನೂ ಮಿಸುಕಬಾರದು– ಇಡಬಾರದು. ಪ್ರಳಯ ಕಾಲನ ಮುಸುಕನು+ ಉಗಿವವನು+ ಆರು,= ಈ ಸೈನ್ಯ ಪ್ರಳಯಕಾಲದ ರುದ್ರನಂತಿದೆ– ಮಲಗಿದ ರುದ್ರನ ಮುಸಕನ್ನು ತೆಗೆಯುವವನು ಯಾರಿದ್ದಾರೆ? ಕೌರವನು+ ಅಸಮ ಬಲನೈ ರಥವ ಮರಳಿಚು ಜಾಳಿಸುವೆನು+ ಎಂದ= ಕೌರವನು ಅಸಮ– ಸರಿಸಾಟಿಯಿಲ್ಲದ ಬಲಶಾಲಿಯೇ ಸರಿ. ರಥವನ್ನು ಮರಳಿಚು– ಹಿಂದಕ್ಕೆ ಹೊಡಿ. ಹಿಂತಿರುಗುವೆನು– ನಡುಗುತ್ತಿದ್ದೇನೆ ಎಂದ.

ಅರ್ಥ: ಈ ಸೈನ್ಯವನ್ನು ನೋಡಿದರೆ– ಹಸಿದಿರುವ ಮಾರಿ ಒಬ್ಬಳಲ್ಲ– ಅನೇಕ ಹಸಿದ ಮಾರಿಗಳ ಮದ್ಯೆ ಕುರಿಯಂತೆ ನಾನು ನುಗ್ಗಿದ ಹಾಗಾಯಿತು. ಬೃಹನ್ನಳೆ ಕುದುರೆಗಳನ್ನು ಓಡಿಸಬೇಡ; ಕುದುರೆಗಳನ್ನು ತಡೆದು ನಿಲ್ಲಿಸು. ಚಿಮ್ಮಟಿಗೆಯನು ಬಿಸುಡು– ಎಸೆದುಬಿಡು! ಒಂದು ಹೆಜ್ಜೆಯನ್ನೂ ಮುಂದೆ ಇಡಬಾರದು. ಈ ಸೈನ್ಯ ಪ್ರಳಯಕಾಲದ ರುದ್ರನಂತಿದೆ– ಮಲಗಿದ ರುದ್ರನ ಮುಸಕನ್ನು ತೆಗೆಯುವವನು ಯಾರಿದ್ದಾರೆ? ಕೌರವನು ಸರಿಸಾಟಿಯಿಲ್ಲದ ಬಲಶಾಲಿಯೇ ಸರಿ. ರಥವನ್ನು ಹಿಂದಕ್ಕೆ ಹೊಡಿ. ಹಿಂತಿರುಗುವೆನು, ನಡುಗುತ್ತಿದ್ದೇನೆ ಎಂದ.

**ಎಲೆ ಕುಮಾರಕ ಮೊದಲ ಚುಂಬನ**
**ದೊಳಗೆ ಹಲು ಬಿದ್ದಂತೆ ಕಾಳಗ**
**ದೊಳಗೆ ಬೆರೆಯದ ಮುನ್ನ ಹಿಡಿದೈ ಸಮರ ಭೀತಿಯನು ।**
**ಅಳುಕಲಾಗದು ನಿಮ್ಮ ತಂದೆಯ**
**ಕುಲಕೆ ಕುಂದನು ತಾರದಿರು ಮನ**
**ಗೆಲವಿನಲಿ ಕಾದೆನುತ ರಥವನು ಬೇಗ ಹರಿಸಿದನು ॥ 8 ॥**

ಪದವಿಭಾಗ–ಅರ್ಥ: ಎಲೆ ಕುಮಾರಕ ಮೊದಲ ಚುಂಬನದೊಳಗೆ ಹಲು ಬಿದ್ದಂತೆ, ಕಾಳಗದೊಳಗೆ ಬೆರೆಯದ ಮುನ್ನ ಹಿಡಿದೈ ಸಮರ ಭೀತಿಯನು, ಅಳುಕಲಾಗದು ನಿಮ್ಮ ತಂದೆಯ ಕುಲಕೆ ಕುಂದನು ತಾರದಿರು, ಮನಗೆಲವಿನಲಿ ಕಾದು+ ಎನುತ ರಥವನು ಬೇಗ ಹರಿಸಿದನು.

ಅರ್ಜುನನು, 'ಎಲೆ ಕುಮಾರನೇ! ಪ್ರೇಮದ ಮೊದಲ ಹಂತದಲ್ಲಿ ಚುಂಬನ ಮಾಡಿದಾಗ ಹಲ್ಲು ಉದುರಿದ ಹಾಗೆ ಆಯಿತು,'ಎಂದನು. ("ಮೊದಲ ಚುಂಬನದೊಳಗೆ ಹಲು ಬಿದ್ದಂತೆ", ಗಾದೆಗಳಲ್ಲಿ ಈ ಮಾತು ಸೇರಿದೆ.) ಕಾಳಗದೊಳಗೆ ಬೆರೆಯದ ಮುನ್ನ ಹಿಡಿದೈ ಸಮರ ಭೀತಿಯನು= ಯುದ್ಧವನ್ನು ಆರಂಭಿದುವ ಮೊದಲೇ ಯುದ್ಧಭೀತಿಯನ್ನು ಹೊಂದಿದೆಯಲ್ಲಾ!, ಅಳುಕಲಾಗದು ನಿಮ್ಮ ತಂದೆಯ ಕುಲಕೆ ಕುಂದನು ತಾರದಿರು, ಮನಗೆಲವಿನಲಿ ಕಾದು+ ಎನುತ ರಥವನು ಬೇಗ ಹರಿಸಿದನು= ಯುದ್ಧಕ್ಕೆ ಹೆದರಬಾರದು, ನಿಮ್ಮ ತಂದೆಯ ಕುಲಕ್ಕೆ ಕುಂದನ್ನು ತರಬೇಡ, ಮನ ಗೆಲವಿನಲಿ ಕಾದು+= ಧೈರ್ಯ ಮತ್ತು ಗೆಲುವಿನಿಂದ ಯುದ್ಧಮಾಡು ಎಂದು ಹೇಳಿ, ಪಾರ್ಥನು ರಥವನ್ನು ಬೇಗ ಮುಂದಕ್ಕೆ ಹರಿಸಿದನು.

ಅರ್ಥ: ಅರ್ಜುನನು, 'ಎಲೆ ಕುಮಾರನೇ! ಪ್ರೇಮದ ಮೊದಲ ಹಂತದಲ್ಲಿ ಚುಂಬನ ಮಾಡಿದಾಗ ಹಲ್ಲು ಉದುರಿದ ಹಾಗೆ ಆಯಿತು,'ಎಂದನು. ಯುದ್ಧವನ್ನು ಆರಂಭಿದುವ ಮೊದಲೇ ಯುದ್ಧಭೀತಿಯನ್ನು ಹೊಂದಿದೆಯಲ್ಲಾ! ಯುದ್ಧಕ್ಕೆ ಹೆದರಬಾರದು, ನಿಮ್ಮ ತಂದೆಯ ಕುಲಕ್ಕೆ ಕುಂದನ್ನು ತರಬೇಡ, ಧೈರ್ಯ ಮತ್ತು ಗೆಲುವಿನಿಂದ ಯುದ್ಧಮಾಡು ಎಂದು ಹೇಳಿ, ಪಾರ್ಥನು ರಥವನ್ನು ಬೇಗ ಮುಂದಕ್ಕೆ ಹರಿಸಿದನು.

**ಸಾರಿ ಬರ ಬರಲವನ ತನು ಮಿಗೆ**
**ಭಾರಿಸಿತು ಮೈ ಮುರಿದು ರೋಮ ವಿ**
**ಕಾರ ಘನ ಕಾಹೇರಿತವಯವ ನಡುಗಿ ಡೆಂಡಣಿಸಿ**
**ಭೂರಿ ಭಯ ತಾಪದಲಿ ತಾಳಿಗೆ**
**ನೀರುದೆಗೆದುದು ತುಟಿಯೊಣಗಿ ಸುಕು**
**ಮಾರ ಕಣ್ಣೆವೆ ಸೀಯೆ ಕರದಲಿ ಮುಚ್ಚಿದನು ಮುಖವ ॥ 9 ॥**

ಪದವಿಭಾಗ–ಅರ್ಥ: ಸಾರಿ ಬರ ಬರಲು+ ಅವನ ತನು ಮಿಗೆ ಬಾರಿಸಿತು ಮೈ ಮುರಿದು ರೋಮ ವಿಕಾರ ಘನ ಕಾಹೇರಿತು+ ಅವಯವ ನಡುಗಿ ಡೆಂಡಣಿಸಿ ಭೂರಿ ಭಯ ತಾಪದಲಿ ತಾಳಿಗೆ ನೀರು+ ದ+ ತೆಗೆದುದು ತುಟಿಯೊಣಗಿ ಸುಕುಮಾರ ಕಣ್ಣೆವೆ ಸೀಯೆ ಕರದಲಿ ಮುಚ್ಚಿದನು ಮುಖವ.

ಸಾರಿ ಬರ ಬರಲು+ ಅವನ ತನು ಮಿಗೆ ಬಾರಿಸಿತು= ರಥವು ಮುಂದೆ ಸಾರಿ ಬರ ಬರುತ್ತಿಲು+,ಅವನ ತನು– ದೇಹ ಮಿಗೆ ಬಾರಿಸಿತು– ಕುಗ್ಗಿತು, ಮೈ ಮುರಿದು– ಹಿಂಡಿದಂತಾಗಿ, ರೋಮ ವಿಕಾರ ಘನ ಕಾಹೇರಿತು+= ರೋಮಗಳು ಎದ್ದುನಿಂತು ಮೈ ಬಿಸಿಯಾಯಿತು. ಅವಯವ ನಡುಗಿ ಡೆಂಡಣಿಸಿ= ದೇಹದ ಅಂಗಾಂಗಗಳು ನಡುಗಿ ದೇಹವು ಓಲಾಡಿ, ಭೂರಿ ಭಯ ತಾಪದಲಿ ತಾಳಿಗೆ ನೀರು+ ದ+ ತೆಗೆದುದು= ಅತಿಭಯದ ಸಂಕಟದಿಂದ ನಾಲಿಗೆ ಒಣಗಿತು. ತುಟಿಯೊಣಗಿ ಸುಕುಮಾರ ಕಣ್ಣೆವೆ ಸೀಯೆ= ತುಟಿಗಳು ಒಣಗಿದವು ಕಣ್ಣುಗಳು ಸೀದಂತೆ ಹೊರಚಾಚಿದವು. ಕರದಲಿ ಮುಚ್ಚಿದನು ಮುಖವ= ಆಗ ಅವನು ತನ್ನ ಕೈಗಳಿಂದ ಮುಖವನ್ನು ಮುಚ್ಚಕೊಂಡನು.

ಅರ್ಥ: ರಥವು ಮುಂದೆ ಸಾರಿ ಹೋಗುತ್ತಿರಲು ಅವನ ದೇಹ ಕುಗ್ಗಿತು, ಮೈ ಹಿಂಡಿದಂತಾಗಿ, ರೋಮಗಳು ಎದ್ದುನಿಂತು ಮೈ ಬಿಸಿಯಾಯಿತು. ದೇಹದ ಅಂಗಾಂಗಗಳು ನಡುಗಿ ದೇಹವು ಓಲಾಡಿ, ಅತಿಭಯದ ಸಂಕಟದಿಂದ ನಾಲಿಗೆ ಒಣಗಿತು. ತುಟಿಗಳು ಒಣಗಿದವು; ಕಣ್ಣುಗಳು ಸೀದಂತೆ ಹೊರಚಾಚಿದವು. ಆಗ ಅವನು ತನ್ನ ಕೈಗಳಿಂದ ಮುಖವನ್ನು ಮುಚ್ಚಕೊಂಡನು.

**ಏಕೆ ಸಾರಥಿ ರಥವ ಮುಂದಕೆ**
**ನೂಕಿ ಗಂಟಲ ಕೊಯ್ವೆ ಸುಡು ಸುಡು**
**ಕಾಕಲಾ ಕಣ್ಣೊಡೆದವೇ ಕಾಣಾ ಮಹಾಬಲವ ।**
**ನಾಕನಿಳಯರಿಗರಿದು ನಿನಗೆ ವಿ**
**ವೇಕವೆಳ್ಳನಿತಿಲ್ಲ ತೆಗೆ ತೆಗೆ**
**ಸಾಕು ವಾಘೆಯ ಮರಳಿ ಹಿಡಿ ತೇಜಿಗಳ ತಿರುಹೆಂದ ॥ 10 ॥**
ಪದವಿಭಾಗ-ಅರ್ಥ: ಏಕೆ ಸಾರಥಿ ರಥವ ಮುಂದಕೆ ನೂಕಿ ಗಂಟಲ ಕೊಯ್ವೆ ಸುಡು ಸುಡು ಕಾಕಲಾ- ಕಣ್ಣು+ ಒಡೆದವೇ ಕಾಣಾ ಮಹಾಬಲವ ನಾಕ ನಿಳಯರಿಗೆ+ ಅರಿದು, ನಿನಗೆ ವಿವೇಕವು+ ಎಳ್ಳನಿತಿಲ್ಲ ತೆಗೆ ತೆಗೆಸಾಕು ವಾಘೆಯ ಮರಳಿ ಹಿಡಿ ತೇಜಿಗಳ ತಿರುಹೆಂದ.

ಏಕೆ ಸಾರಥಿ ರಥವ ಮುಂದಕೆ ನೂಕಿ ಗಂಟಲ ಕೊಯ್ವೆ= ಸಾರಥಿಯೇ ರಥವನ್ನು ಮುಂದಕ್ಕೆ ಓಡಿಸಿ ನನ್ನ ಗಂಟಲನ್ನು ಕೊಯ್ಯುವ ಕೆಲಸ ಮಾಡುವೆ? ಸುಡು ಸುಡು ಕಾಕಲಾ(ಕಾಕು- ಕೆಟ್ಟ ಮನುಷ್ಯ) ಕಣ್ಣು+ ಒಡೆದವೇ= ಸುಡು ಸುಡು, ಕೇಡಿಗನಲಾ! ನೋಡುವ ಆ ನಿನ್ನ ಕಣ್ಣುಗಳು ಒಡೆದವೇ? ಕಾಣಾ ಮಹಾಬಲವ= ಎದುರಿಗೆ ಆ ಮಹಾ ಸೈನ್ಯವನ್ನು ಕಾಣೋ ನೋಡೋ!? ನಾಕ (ದೇವಲೋಕ) ನಿಳಯರಿಗೆ+ ಅರಿದು= ಅದನ್ನು ಎದುರಿಸಲು ದೇವಲೋಕದ ವಾಸಿಗಳಿಗೂ ಅರಿದು- ಅಸಾದ್ಯ. ನಿನಗೆ ವಿವೇಕವು+ ಎಳ್ಳನಿತಿಲ್ಲ - ಎಳ್ಳಿನಷ್ಟೂ ಇಲ್ಲ, ತೆಗೆ ತೆಗೆಸಾಕು ವಾಘೆಯ ಮರಳಿ ಹಿಡಿ ತೇಜಿಗಳ ತಿರುಹೆಂದ= ನಿಲ್ಲಿಸು ಸಾಕು, ಕುದುರೆಯ ವಾಘೆಗಳನ್ನು ಹಿಡಿದು ತಿರುಗಿಸಿ ಹೊಡೆ ಎಂದ ಉತ್ತರ.

ಅರ್ಥ: ಸಾರಥಿಯೇ ರಥವನ್ನು ಮುಂದಕ್ಕೆ ಓಡಿಸಿ ನನ್ನ ಗಂಟಲನ್ನು ಕೊಯ್ಯುವ ಕೆಲಸ ಮಾಡುವೆ? ಸುಡು ಸುಡು, ಕೇಡಿಗನೇ ನಿನ್ನ ನೋಡುವ ಆ ಕಣ್ಣುಗಳು ಒಡೆದವೇ? ಎದುರಿಗೆ ಆ ಮಹಾ ಸೈನ್ಯವನ್ನು ನೋಡೋ! ಅದನ್ನು ಎದುರಿಸಲು ದೇವಲೋಕದ ವಾಸಿಗಳಿಗೂ ಅಸಾದ್ಯ. ನಿನಗೆ ವಿವೇಕವು ಎಳ್ಳಿನಷ್ಟೂ ಇಲ್ಲ, ತೆಗೆ ತೆಗೆ ಸಾಕು ನಿಲ್ಲಿಸು, ಕುದುರೆಯ ವಾಘೆಗಳನ್ನು ಹಿಡಿದು ತಿರುಗಿಸಿ ಹೊಡೆ ಎಂದ ಉತ್ತರ.

**ಎಂದೊಡರ್ಜುನ ನಗುತ ರಥವನು**
**ಮುಂದೆ ನಾಲ್ಕೆಂಟಡಿಯ ನೂಕಲು**
**ಕೊಂದನೀ ಸಾರಥಿಯೆನುತ ಸಂವರಿಸಿ ಮುಂಜೆರಗ ।**
**ಬಂದು ಮೆಲ್ಲನೆ ರಥದ ಹಿಂದಕೆ**
**ನಿಂದು ಧುಮ್ಮಿಕ್ಕಿದನು ಬದುಕಿದೆ**
**ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ ॥ 12 ॥**
ಪದವಿಭಾಗ-ಅರ್ಥ: ಎಂದೊಡೆ+ ಅರ್ಜುನ ನಗುತ ರಥವನು ಮುಂದೆ ನಾಲ್ಕೆಂಟು+ ಅಡಿಯ ನೂಕಲು, ಕೊಂದನು+ ಈ ಸಾರಥಿಯೆ+ ಎನುತ ಸಂವರಿಸಿ ಮುಂಜೆರಗ ಬಂದು ಮೆಲ್ಲನೆ ರಥದ ಹಿಂದಕೆ ನಿಂದು, ಧುಮ್ಮಿಕ್ಕಿದನು ಬದುಕಿದೆನು+ ಎಂದು ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ.

ಉತ್ತರನು,'ನೀನು ಸ್ವಾಮಿದ್ರೋಹ ಮಾಡುತ್ತಿರುವೆ ಎಂದಾಗ, ಎಂದೊಡೆ+ ಅರ್ಜುನ ನಗುತ- ನಗುತ್ತಾ, ರಥವನು ಮುಂದೆ ನಾಲ್ಕೆಂಟು+ ಅಡಿಯ ನೂಕಲು= ರಥವನ್ನು ನಾಲ್ಕು-ಎಂಟು ಅಡಿಯಷ್ಟು ಮುಂದೆ ಹೊಡೆಯಲು,, ಕೊಂದನು+ ಈ ಸಾರಥಿಯೆ+ ಎನುತ ಸಂವರಿಸಿ- = ಉತ್ತರನು ಈ ಸಾರಥಿ ಯುದ್ಧಕ್ಕೆ ನೂಕಿ, ತನ್ನನ್ನು ಕೊಂದುಹಾಕುತ್ತಾನೆ ಎಂದುಕೊಂಡು, ಮುಂಜೆರಗ ಬಂದು ಮೆಲ್ಲನೆ ರಥದ ಹಿಂದಕೆ ನಿಂದು,= ರಥದ ಹಿಂಭಾಗದಲ್ಲಿ ಮುಂದೆ ಮುಂದೆ ಜರುಗಿ, ಎದ್ದುನಿಂತು ಕೆಳಗೆ ಹಾರಿ,/ ಧುಮ್ಮಿಕ್ಕಿದನು= ಹಾರಿ ಓಡಿದನು; ಬದುಕಿದೆನು+ ಎಂದು= ಬದುಕಿದೆ ಎಂದು ಕೊಂಡನು. ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ= ತಲೆಯ ಕೂದಲು ಎತ್ತಿಕಟ್ಟಿದ್ದು ಬಿಚ್ಚಿ ಕೆದರಿಹೋಯಿತು, ಹಾಗೆಯೇ ನಿಟ್ಟೋಟದಿಂದ (ನೇರವಾದ ಓಟ) ಹಿಂದಕ್ಕೆ ಓಡಿದನು.

ಅರ್ಥ: ಉತ್ತರನು,'ನೀನು ಸ್ವಾಮಿದ್ರೋಹ ಮಾಡುತ್ತಿರುವೆ ಎಂದಾಗ, ಅರ್ಜುನ ನಗುತ್ತಾ, ರಥವನ್ನು ನಾಲ್ಕು-ಎಂಟು ಅಡಿಯಷ್ಟು ಮುಂದೆ ಹೊಡೆಯಲು, ಉತ್ತರನು ಈ ಸಾರಥಿಯು ಯುದ್ಧಕ್ಕೆ ನೂಕಿ, ತನ್ನನ್ನು ಕೊಂದುಹಾಕುತ್ತಾನೆ ಎಂದುಕೊಂಡು, ರಥದ ಹಿಂಭಾಗದ ಕಡೆ ಮುಂದೆ ಮುಂದೆ ಜರುಗಿ, ಎದ್ದುನಿಂತು ಕೆಳಗೆ ಹಾರಿ ಓಡಿದನು; ಬದುಕಿದೆ ಎಂದು ಕೊಂಡನು. ('ಬದುಕಿದೆಯ ಬಡ ಜೀವ,' ಎಂದು) ತಲೆಯ ಕೂದಲು ಎತ್ತಿಕಟ್ಟಿದ್ದು ಬಿಚ್ಚಿ ಕೆದರಿಹೋಯಿತು, ಹಾಗೆಯೇ ನಿಟ್ಟೋಟದಿಂದ ಹಿಂತಿರುಗಿ ಓಡಿದನು.

**ನೋಡಿದನು ಕಲಿಪಾರ್ಥನೀ ಕೇ**
**ಡಾಡಿ ಕೆದರಿದ ಕೇಶದಲಿ ಕೆ**
**ಟ್ಟೋಡುತಿರಲೆಲೆ ಪಾಪಿ ಹಾಯ್ದನು ಹಿಡಿಯಬೇಕೆನುತ ।**
**ಕೂಡೆ ಸೂಟಿಯೊಳಟ್ಟಲಿಳೆಯ**
**ಲ್ಲಾಡಲಹಿಪತಿ ಹೆದರಲಿತ್ತಲು**
**ನೋಡಿ ಕೌರವಸೇನೆ ಕೆಡೆದುದು ನಗೆಯ ಕಡಲೊಳಗೆ ॥ 13 ॥**
ಪದವಿಭಾಗ-ಅರ್ಥ: ನೋಡಿದನು ಕಲಿಪಾರ್ಥನು+ ಈ ಕೇಡಾಡಿ ಕೆದರಿದ ಕೇಶದಲಿ ಕೆಟ್ಟೋಡುತಿರಲು+ ಎಲೆ ಪಾಪಿ ಹಾಯ್ದನು ಹಿಡಿಯಬೇಕು ಎನುತ ಕೂಡೆ ಸೂಟಿಯೊಳಟ್ಟಲಿಳೆಯು+ ಅಲ್ಲಾಡಲು+ ಅಹಿಪತಿ ಹೆದರಲು+ ಇತ್ತಲು ನೋಡಿ ಕೌರವಸೇನೆ ಕೆಡೆದುದು ನಗೆಯ ಕಡಲೊಳಗೆ

ನೋಡಿದನು ಕಲಿಪಾರ್ಥನು+ ಈ ಕೇಡಾಡಿ ಕೆದರಿದ ಕೇಶದಲಿ ಕೆಟ್ಟೋಡುತಿರಲು+= ಕಲಿಪಾರ್ಥನು ಈ ಕೇಡಾಡಿಯಾದ(ಕೆಡುಕನ್ನು ಮಾಡುವ) ಉತ್ತರನು ಕೆದರಿರುವ ಕೂದಲನ್ನು ಬಿಟ್ಟುಕೊಂಡು ಕೆಟ್ಟೋಡುತಿರಲು- ವೇಗವಾಗಿ ಓಡುತ್ತಿರುವುದನ್ನು ನೋಡಿದನು + // ಎಲೆ ಪಾಪಿ ಹಾಯ್ದನು ಹಿಡಿಯಬೇಕು ಎನುತ= ಎಲೆ ಪಾಪಿ- 'ಯುದ್ಧಬಿಟ್ಟೋಡುವ ಅಪರಾಧಿ', ಕೂಡೆ ಸೂಟಿಯೊಳು+ಅಟ್ಟಲು+ ಇಳೆಯು+ ಅಲ್ಲಾಡಲು+ ಅಹಿಪತಿ ಹೆದರಲು+= ತಕ್ಷಣ ಚುರುಕಾಗಿ ಬೆನ್ನಟ್ಟಿದನು, ಅವನ- ಅರ್ಜುನನ ಹೆಜ್ಜೆಯ ರಭಸಕ್ಕೆ ಭೂಮಿಯು ಅಲುಗಿ, ಅಹಿಪತಿ- ಭೂಮಿಯನ್ನು ಹೊತ್ತ ವಾಸುಕಿಯು ಹೆದರಿದನು- ಇದೇನು ಎಂದು! ಇತ್ತಲು ನೋಡಿ ಕೌರವಸೇನೆ ಕೆಡೆದುದು ನಗೆಯ ಕಡಲೊಳಗೆ= ಇತ್ತಲು= ಇತ್ತ ಕೌರವನ ಸೇನೆಯಲ್ಲಿ ಇದನ್ನು ನೋಡಿ ಇಡೀ ಕೌರವಸೇನೆ;/ ಕೆಡೆದುದು ನಗೆಯ ಕಡಲೊಳಗೆ= ನಗೆಯ ಸಮುದ್ರದಲ್ಲಿ ಬಿದ್ದಿತು- ಮುಳುಗಿತು.

ಅರ್ಥ: ಕಲಿಪಾರ್ಥನು ಈ ಕೇಡಾಡಿಯಾದ ಉತ್ತರನು ಕೆದರಿರುವ ಕೂದಲನ್ನು ಬಿಟ್ಟುಕೊಂಡು ವೇಗವಾಗಿ ಓಡುತ್ತಿರುವುದನ್ನು ನೋಡಿದನು. ಎಲೆ ಪಾಪಿ ಎಲೆ ಪಾಪಿ-ಎಂದು, ತಕ್ಷಣ ಚುರುಕಾಗಿ ಬೆನ್ನಟ್ಟಿದನು, ಅರ್ಜುನನ ಹೆಜ್ಜೆಯ ರಭಸಕ್ಕೆ ಭೂಮಿಯು ಅಲುಗಿ, ಭೂಮಿಯನ್ನು ಹೊತ್ತ ವಾಸುಕಿಯು ಹೆದರಿದನು- ಇದೇನು ಎಂದು! ಇತ್ತ ಕೌರವನ ಸೇನೆಯಲ್ಲಿ ಇದನ್ನು ನೋಡಿ ಇಡೀ ಕೌರವಸೇನೆ ನಗೆಯ ಸಮುದ್ರದಲ್ಲಿ ಬಿದ್ದಿತು.

**ಇತ್ತಲರ್ಜುನನುತ್ತರನ ಬೆಂ**
**ಬತ್ತಿ ಬಂದನು ಹೋದೆಯಾದರೆ**
**ಕಿತ್ತು ಬಿಸುಡುವೆ ನಿನ್ನ ತಲೆಯನು ನಿಲ್ಲು ನಿಲ್ಲೆನುತ ।**
**ಮೃತ್ಯುವೋ ಸಾರಥಿಯೊ ಪಾಪಿಯ**
**ನೆತ್ತಣಿಂದವೆ ಮಾಡಿ ಕೊಂಡೆನೆ**
**ನುತ್ತ ಮರಳಿದು ನೋಡಿ ನಿಲ್ಲದೆ ಮತ್ತೆ ಸೈವರಿದ ॥ 16 ॥**
ಪದವಿಭಾಗ-ಅರ್ಥ: ಇತ್ತಲು+ ಅರ್ಜುನನು+ ಉತ್ತರನ ಬೆಂಬತ್ತಿ ಬಂದನು ಹೋದೆಯಾದರೆ ಕಿತ್ತು ಬಿಸುಡುವೆ ನಿನ್ನ ತಲೆಯನು ನಿಲ್ಲು ನಿಲ್ಲೆನುತ ಮೃತ್ಯುವೋ ಸಾರಥಿಯೊ ಪಾಪಿಯನು+ ಎತ್ತಣಿಂದವೆ ಮಾಡಿ ಕೊಂಡೆನು ಎನುತ್ತ ಮರಳಿದು ನೋಡಿ ನಿಲ್ಲದೆ ಮತ್ತೆ ಸೈವರಿದ

ಇತ್ತಲು= ಸೈನ್ಯದಿಂದ ಈ ಕಡೆ, ಇತ್ತಲು+ ಅರ್ಜುನನು+ ಉತ್ತರನ ಬೆಂಬತ್ತಿ ಬಂದನು, (ಮುಂದೆ)ಹೋದೆಯಾದರೆ ಕಿತ್ತು ಬಿಸುಡುವೆ- ಕತ್ತರಿಸಿಹಾಕುವೆ, ನಿನ್ನ ತಲೆಯನು; ನಿಲ್ಲು ನಿಲ್ಲು+ ಎನುತ; (ಇವನು)ಮೃತ್ಯುವೋ ಸಾರಥಿಯೊ ಪಾಪಿಯನು+ ಎತ್ತಣಿಂದವೆ(ಎಲ್ಲಿಂದ) ಮಾಡಿ ಕೊಂಡೆನು ಎನುತ್ತ ಮರಳಿದು- ತಿರುಗಿ ನೋಡಿ ನಿಲ್ಲದೆ ಮತ್ತೆ ಸೈವರಿದ- ಮುಂದೆ ಓಡಿದ.

ಅರ್ಥ: ಸೈನ್ಯದಿಂದ ಈ ಕಡೆ, ಅರ್ಜುನನು ಉತ್ತರನನ್ನು ಬೆಂಬತ್ತಿ- ಅಟ್ಟಿಸಿಕೊಂಡು ಬಂದನು, ಅವನು ಉತ್ತರನಿಗೆ, ನಿಲ್ಲು ನಿಲ್ಲು ಎನುತ್ತಾ, ಮುಂದೆ ಹೋದೆಯಾದರೆ ನಿನ್ನ ತಲೆಯನ್ನು ಕತ್ತರಿಸಿಹಾಕುವೆ ಎಂದು ಹೆದರಿಸಿದನು; ಉತ್ತರನು ಇವನು ಮೃತ್ಯುವೋ

ಸಾರಥಿಯೊ! ಈ ಪಾಪಿಯನು ಎಲ್ಲಿಂದ ತಂದು ಸಾರಥಿಯನ್ನಾಗಿ ಮಾಡಿಕೊಂಡೆನಪ್ಪಾ, ಎನುತ್ತಾ ತಿರುಗಿ ನೋಡಿ ನಿಲ್ಲದೆ ಮತ್ತೆ ಮುಂದೆ ಓಡಿದ.

**ಹಲುಗಿರಿದು ಬಾಯೊಳಗೆ ಬೆರಳಿ**
**ಟ್ಟಳುಕಿ ತಲೆವಾಗಿದನು ಸಾರಥಿ**
**ಕಳುಹಿ ಕಳೆಯೈ ನಿನ್ನ ಬಸುರಲಿ ಮರಳಿ ಬಂದವನು ।**
**ಕೊಳುಗುಳದೊಳೀಯೊಡ್ಡ ಮುರಿವ**
**ಗ್ಗಳೆಯರುಂಟೇ ಲೋಗರಿಂದವೆ**
**ಕೊಲಿಸದಿರು ನೀ ಕುತ್ತಿ ಕೆಡಹು ಕಠಾರಿಯಿದೆಯೆಂದ ॥ 18 ॥**

ಪದವಿಭಾಗ-ಅರ್ಥ: ಹಲುಗಿರಿದು ಬಾಯೊಳಗೆ ಬೆರಳಿಟ್ಟು+ ಅಳುಕಿ ತಲೆವಾಗಿದನು ಸಾರಥಿ ಕಳುಹಿ ಕಳೆಯೈ ನಿನ್ನ ಬಸುರಲಿ ಮರಳಿ ಬಂದವನು; ಕೊಳುಗುಳದೊಳು ಈ ಯೊಡ್ಡ ಮುರಿವು+ ಅಗ್ಗಳೆಯರು+ ಉಂಟೇ ಲೋಗರಿಂದವೆ ಕೊಲಿಸದಿರು, ನೀ ಕುತ್ತಿ ಕೆಡಹು ಕಠಾರಿಯಿದೆ+ ಯೆ+ ಎಂದ.

ಹಲುಗಿರಿದು ಬಾಯೊಳಗೆ ಬೆರಳಿಟ್ಟು+ ಅಳುಕಿ ತಲೆವಾಗಿದನು= ನಾಚಿಕೆಯಿಂದ ಉತ್ತರಕೊಡಲಾಗದೆ, ಹಲ್ಲುಕಿರಿದು ಕೃತಕ ನಗುವನ್ನು ತೊರಿ, ನಾಚಿಕೆಯಿಂದ ತಲೆ ತಗ್ಗಿಸಿದನು. ಮತ್ತೆ ಹೇಳಿದನು, ಸಾರಥಿ ಕಳುಹಿ ಕಳೆಯೈ ನಿನ್ನ ಬಸುರಲಿ ಮರಳಿ ಬಂದವನು= ಸಾರಥಿಯೇ ನನ್ನನ್ನು ಬಿಟ್ಟು ಕಳಿಸಪ್ಪಾ! ನಿನ್ನ ಹೊಟ್ಟೆಯಲ್ಲಿ ಮತ್ತೆ ಹುಟ್ಟಿಬಂದವನು ಎಂದು ಕೊಳ್ಳುತ್ತೇನೆ./ ಕೊಳುಗುಳದೊಳು ಈ ಯೊಡ್ಡ ಮುರಿವ+ ಅಗ್ಗಳೆಯರು+ ಉಂಟೇ= ಯುದ್ಧದಲ್ಲಿ ಈ ದೊಡ್ಡ ಸೈನ್ಯವನ್ನು ಒಬ್ಬರೇ ಸೋಲಿಸುವ ಶ್ರೇಷ್ಠವೀರರು ಇದ್ದಾರೆಯೇ? ಲೋಗರಿಂದವೆ ಕೊಲಿಸದಿರು, ನೀ ಕುತ್ತಿ ಕೆಡಹು ಕಠಾರಿಯಿದೆ+ ಯೆ+ ಎಂದ= ನಿನಗೆ ನನ್ನನ್ನು ಸಾಯಿಸಬೇಕೆಂದಿದ್ದರೆ- ಅವರಿವರಿಂದ ಕೊಲ್ಲಿಸಬೇಡ, ನೀನೇ ಕೊಂದುಬಿಡು – ಇಗೋ ಕತ್ತಿಯನ್ನು ತೆಗೆದುಕೋ, ಎಂದ ಉತ್ತರ.

ಅರ್ಥ:ನಾಚಿಕೆಯಿಂದ ಉತ್ತರಕೊಡಲಾಗದೆ, ಹಲ್ಲುಕಿರಿದು ಕೃತಕ ನಗುವನ್ನು ತೊರಿ, ಬಾಯಲ್ಲಿ ತುದಿಬೆರಳನ್ನು ಇಟ್ಟುಕೊಂಡು, ನಾಚಿಕೆಯಿಂದ ತಲೆ ತಗ್ಗಿಸಿದನು. ಮತ್ತೆ ಹೇಳಿದನು, ಸಾರಥಿಯೇ, ನನ್ನನ್ನು ಬಿಟ್ಟು ಕಳಿಸಪ್ಪಾ! ನಿನ್ನ ಹೊಟ್ಟೆಯಲ್ಲಿ ಮತ್ತೆ ಹುಟ್ಟಿಬಂದವನು ಎಂದು ಕೊಳ್ಳುತ್ತೇನೆ. ಈ ಯುದ್ಧದಲ್ಲಿ ಈ ದೊಡ್ಡ ಸೈನ್ಯವನ್ನು ಒಬ್ಬರೇ ಸೋಲಿಸುವ ಶ್ರೇಷ್ಠವೀರರು ಎಲ್ಲಿಯಾದರೂ ಇದ್ದಾರೆಯೇ? ನಿನಗೆ ನನ್ನನ್ನು ಸಾಯಿಸಬೇಕೆಂದಿದ್ದರೆ- ಅವರಿವರಿಂದ ಕೊಲ್ಲಿಸಬೇಡ, ನೀನೇ ಕೊಂದುಬಿಡು – ಇಗೋ ಕತ್ತಿಯನ್ನು ತೆಗೆದುಕೋ, ಎಂದ ಉತ್ತರ.

***ಟಿಪ್ಪಣಿ:**ಹಿಂದಿನ ಅವನ ಹುಡುಗಾಟಿಕೆಯ ಜಂಬದ ಮಾತನ್ನು ಬಿಟ್ಟರೆ, ಅಗಾಧ ಸೈನ್ಯದ ಎದುರು ಅವನ ನೆಡೆ- ಅದು ಆ ಸಮಯಕ್ಕೆ ವಾಸ್ತವವಾಗಿತ್ತು.

**ಎಲವೊ ಸಾರಥಿಯಾಗು ನಡೆ ನೀ**
**ಗಳಹಿದೊಡೆ ಕಟವಾಯ ಕೊಯ್ವೆನು**
**ಕೊಲುವೆನೀ ಪ್ರತಿಭಟ ನಿಕಾಯವ ನಿನ್ನ ಸಾಕ್ಷಿಯಲಿ ।**
**ಬಳಿಕ ನೀ ನಗು ನಡೆಯೆನುತ ರಿಪು**
**ಬಲ ಭಯಂಕರನುತ್ತರನ ಹೆಡ**
**ತಲೆಯ ಹದರಿನೊಳೌಂಕಿ ತಂದನು ರಥವನೇರಿಸಿದ ॥ 30 ॥**

ಪದವಿಭಾಗ-ಅರ್ಥ: ಎಲವೊ ಸಾರಥಿಯಾಗು ನಡೆ, ನೀ ಗಳಹಿದೊಡೆ ಕಟವಾಯ ಕೊಯ್ವೆನು, ಕೊಲುವೆನು+ ಈ ಪ್ರತಿಭಟ ನಿಕಾಯವ ನಿನ್ನ ಸಾಕ್ಷಿಯಲಿ, ಬಳಿಕ ನೀ ನಗು ನಡೆಯೆನುತ ರಿಪುಬಲ ಭಯಂಕರನು+ ಉತ್ತರನ ಹೆಡತಲೆಯ ಹದರಿನೊಳು+ ಔಂಕಿ ತಂದನು ರಥವನು ಏರಿಸಿದ.

ಎಲವೊ ಸಾರಥಿಯಾಗು ನಡೆ, ನೀ ಗಳಹಿದೊಡೆ- ಹರಟಿದರೆ, ಕಟವಾಯ- ಕಟಬಾಯಿ, ಕೊಯ್ವೆನು, ಕೊಲುವೆನು+ ಈ ಪ್ರತಿಭಟ ನಿಕಾಯವ- ಸೈನ್ಯವನ್ನು, ನಿನ್ನ ಸಾಕ್ಷಿಯಲಿ- ನಿನ್ನೆದುರಿಗೆ – ನಿನ್ನಾಣೆ, ಬಳಿಕ ನೀ ನಗು ನಡೆ+ ಯ+ ಎನುತ ರಿಪುಬಲ ಭಯಂಕರನು+ ಉತ್ತರನ ಹೆಡತಲೆಯ (ಹದರ=ಹೆದರಿಸು) ಹದರಿನೊಳು+ ಔಂಕಿ ತಂದನು ರಥವನು ಏರಿಸಿದ.

ಅರ್ಥ:ಅರ್ಜುನನು ಗದರಿಸಿ,'ಎಲವೊ ಸಾರಥಿಯಾಗು ನಡೆ, ನೀನು ಹರಟಿದರೆ, ಕಟಬಾಯನ್ನು ಕೊಯ್ಯುತ್ತೇನೆ. ಎದುರಿಸಿ ನಿಂತ ಸೈನ್ಯವನ್ನು ನಿನ್ನ ಎದುರಿಗೇ ಕೊಲ್ಲತ್ತೇನೆ, ನಿನ್ನಾಣೆ; ಬಳಿಕ ನೀ ನಗುವಿಯಂತೆ ನಡೆ, ಎನ್ನುತ್ತಾ ಶತ್ರುಭಯಂಕರ ಅರ್ಜುನನು ಉತ್ತರನ ಹೆಡತಲೆಯನ್ನು ಔಂಕಿ ಹಿಡಿದುಕೊಂಡು ಹೆದರಿಸಿ ಕರೆತಂದು ರಥವನ್ನು ಹತ್ತಿಸಿದ.

**ತುರಗ ಗರ್ಜನೆ ರಥದ ಚೀತ್ಕೃತಿ**
**ವರ ಧನುಷ್ಟಂಕಾರ ಕಪಿಯ**
**ಬ್ಬರಣೆ ಪಾರ್ಥನ ಬೊಬ್ಬೆ ನಿಷ್ಠುರ ದೇವದತ್ತ ರವ ।**
**ಅರರೆ ಹೊದರೆದ್ದವು ಗಿರಿವ್ರಜ**
**ಬಿರಿಯೆ ಜಲನಿಧಿ ಜರಿಯೆ ತಾರಕಿ**
**ಸುರಿಯೆ ಸುರಕುಲ ಪರಿಯೆ ಭೀತಿಯ ಲಹಿತ ಬಲ ಹರಿಯೆ ॥ 63 ॥**

ಪದವಿಭಾಗ-ಅರ್ಥ: ತುರಗ ಗರ್ಜನೆ ರಥದ ಚೀತ್ಕೃತಿ ವರ ಧನುಷ್ಟಂಕಾರ ಕಪಿಯಬ್ಬರಣೆ ಪಾರ್ಥನ ಬೊಬ್ಬೆ ನಿಷ್ಠುರ ದೇವದತ್ತ ರವ, ಅರರೆ ಹೊದರೆದ್ದವು ಗಿರಿವ್ರಜ ಬಿರಿಯೆ ಜಲನಿಧಿ ಜರಿಯೆ ತಾರಕಿ ಸುರಿಯೆ ಸುರಕುಲ ಪರಿಯೆ ಭೀತಿಯ ಲಹಿತ ಬಲ ಹರಿಯೆ.

ತುರಗ ಗರ್ಜನೆ ರಥದ ಚೀತ್ಕೃತಿ ವರ ಧನುಷ್ಟಂಕಾರ ಕಪಿಯ+ ಉಬ್ಬರಣೆ ಪಾರ್ಥನ ಬೊಬ್ಬೆ ನಿಷ್ಠುರ ದೇವದತ್ತ ರವ= ಕುದುರೆಗಳ ಹೇಷಾರವದ ಗರ್ಜನೆ, ರಥದ ಗಾಲಿಗಳ ಚೀತ್ಕೃತಿಯ ಸದ್ದು, ವರ- ಉತ್ತಮ ಧನುಷ್ಟಂಕಾರ, ಕಪಿಯ+ ಉಬ್ಬರಣೆ- ಕೂಗು, ಪಾರ್ಥನ ಬೊಬ್ಬೆ- ಆರ್ಭಟ, ನಿಷ್ಠುರವಾದ ದೇವದತ್ತ ಶಂಖದ ರವ- ಮೊಳಗು, ಅರರೆ ಹೊದರೆದ್ದವು ಗಿರಿವ್ರಜ- ಬೆಟ್ಟಗಳು ಅಲುಗಾಡಿ ಮೇಲೆದ್ದು ಬಿರಿಯೆ- ಬಿರುಕು ಬಿಟ್ಟವು; ಜಲನಿಧಿ ಜರಿಯೆ- ಸಮುದ್ರ ತಗ್ಗಿತು; ತಾರಕಿ ಸುರಿಯೆ- ನಕ್ಷತ್ರಗಳು ಉದುರಿದವು; ಸುರಕುಲ ಪರಿಯೆ- ದೇವತೆಗಳು ಚಲಿಸಿದರು- ಓಡಿದರು; ಭೀತಿಯ ಲಹಿತ ಬಲ ಹರಿಯೆ- ಭಯದ ಅಪಾಯ ಭಾವನೆ ಸೈನ್ಯದಲ್ಲಿ ಹರಿದಾಡಿತು.

ಅರ್ಥ: ಅರ್ಜುನನ ಕುದುರೆಗಳ ಹೇಷಾರವದ ಗರ್ಜನೆ, ರಥದ ಗಾಲಿಗಳ ಚೀತ್ಕೃತಿಯ ಸದ್ದು, ಉತ್ತಮ ಧನುಷ್ಟಂಕಾರ, ಬಾವುಟದಲ್ಲಿದ್ದ ಕಪಿಯ ಕೂಗು, ಪಾರ್ಥನ ಆರ್ಭಟ, ನಿಷ್ಠುರವಾದ ದೇವದತ್ತ ಶಂಖದ ಮೊಳಗು, ಅರರೆ ಬೆಟ್ಟಗಳು ಅಲುಗಾಡಿ ಮೇಲೆದ್ದು ಬಿರುಕು ಬಿಟ್ಟವು; ಸಮುದ್ರ ತಗ್ಗಿತು; ನಕ್ಷತ್ರಗಳು ಉದುರಿದವು; ದೇವತೆಗಳು ಓಡಿದರು; ಅಪಾಯ ಭಾವನೆಯ ಭಯ ಸೈನ್ಯದಲ್ಲಿ ಹರಿದಾಡಿತು.

**ಶಿರವ ಸಿಡಿಲೆರಗಿದವೊಲುತ್ತರ**
**ತಿರುಗಿ ಬಿದ್ದನು ಮೂರ್ಛೆಯಲಿ ಹೊಡೆ**
**ಮರಳಿದವು ಕಣ್ಣಾಲಿ ಕಾರಿದವರುಣ ವಾರಿಗಳ ।**
**ಹೊರಳುತಿರಲೆಲೆ ಪಾಪಿ ಸೈರಿಸ**
**ಲರಿಯ ನಿನ್ನೇನೆನುತ ಫಲುಗುಣ**
**ಸೆರಗಿನಲಿ ಬೀಸಿದನು ಕುಳ್ಳಿರಿಸಿದನು ರಥದೊಳಗೆ ॥ 64 ॥**

ಪದವಿಭಾಗ-ಅರ್ಥ: ಶಿರವ ಸಿಡಿಲು+ ಎರಗಿದವೊಲು+ ಉತ್ತರ ತಿರುಗಿ ಬಿದ್ದನು ಮೂರ್ಛೆಯಲಿ, ಹೊಡೆ ಮರಳಿದವು ಕಣ್ಣಾಲಿ ಕಾರಿದವು+ ಅರುಣ ವಾರಿಗಳ ಹೊರಳುತಿರಲು+ ಎಲೆ ಪಾಪಿ ಸೈರಿಸಲು+ ಅರಿಯ ನಿನ್ನ+ ಏನು+ ಎನುತ ಫಲುಗುಣ ಸೆರಗಿನಲಿ ಬೀಸಿದನು ಕುಳ್ಳಿರಿಸಿದನು ರಥದೊಳಗೆ.

ಶಿರವ ಸಿಡಿಲು+ ಎರಗಿದವೊಲು- ಹೊಡೆದಂತೆ+ ಉತ್ತರ ತಿರುಗಿ ಬಿದ್ದನು ಮೂರ್ಛೆಯಲಿ, ಹೊಡೆ ಮರಳಿದವು ಕಣ್ಣಾಲಿ ಕಾರಿದವು+ ಅರುಣ ವಾರಿಗಳ- ಕೆಂಪು ನೀರನ್ನು- ರಕ್ತ, ಹೊರಳುತಿರಲು+ ಎಲೆ ಪಾಪಿ ಸೈರಿಸಲು+ ಅರಿಯ- ತಿಳಿಯನು- ಸಹಿಸಿಕೊಳ್ಳಲಾರ, ನಿನ್ನ+ ಏನು+ ಎನುತ ಫಲುಗುಣ ಸೆರಗಿನಲಿ ಬೀಸಿದನು ಕುಳ್ಳಿರಿಸಿದನು ರಥದೊಳಗೆ.

ಅರ್ಥ: ಯುದ್ಧಕ್ಕೆ ಹೊಸಬನಾದ ಉತ್ತರನು ಈ ಆರ್ಭಟಕ್ಕೆ ತಲೆಗೆ ಸಿಡಿಲು ಬಡಿದಂತೆ, ಮೂರ್ಛೆಹೊಗಿ ಹೊರಳಿ ಬಿದ್ದನು. ಹೊಡೆ- ಭಯದ ಭಾವಗಳು ಮತ್ತೆ ಬಂದವು. ಕಣ್ಣಾಲಿಗಳಲ್ಲಿ ಕೆಂಪಡರಿ ರಕ್ತ ಚಿಮ್ಮುವಂತೆ ಆಯಿತು. ಅವನು ಸಂಕಟದಿಂದ ಹೊರಳುತ್ತಿರಲು, ಅರ್ಜುನನು ಕರುಣೆಯಿಂದ, ಎಲೆ ಪಾಪದವನೇ! ಸಹಿಸಿಕೊಳ್ಳಲು ತಿಳಿಯನು! ಆರ್ಭಟವನ್ನು ಸಹಿಸಿಕೊಳ್ಳಲಾರ. ನಿನ್ನನ್ನು ಏನು ಮಾಡಲಿ! ಎನ್ನುತ್ತಾ ಅರ್ಜುನನು ತನ್ನ ಸೆರಗಿನಿಂದ ಗಾಳಿಬೀಸಿ ರಥದೊಳಗೆ ಕುಳ್ಳಿರಿಸಿ ಸಂತೈಸಿದದನು.

**ಏನು ಮತ್ಸ್ಯಕುಮಾರ ಭವಣೆಯಿ**
**ದೇನು ನಿನಗೆಂದೆನಲು ಜಗದವ**
**ಸಾನದಂದದಿ ಸಿಡಿಲು ಸುಳಿದುದು ಬಿರಿದುದೆನ್ನೊಡಲು**
**ಆನಲಾಪೆನೆ ನಿನ್ನ ಬಹಳ**
**ಧ್ವಾನವನು ಸಾಕೆನ್ನ ಕಳುಹು ಮ**
**ಹಾ ನಿಧಾನವ ಮಾಣು ಮಾಣೆನೆ ಪಾರ್ಥನಿಂತೆಂದ 65**

ಪದವಿಭಾಗ-ಅರ್ಥ: ಏನು ಮತ್ಸ್ಯಕುಮಾರ! ಭವಣೆಯಿದೇನು ನಿನಗೆ+ ಎಂದೆನಲು ಜಗದ+ ಅವಸಾನದಂದದಿ ಸಿಡಿಲು ಸುಳಿದುದು, ಬಿರಿದುದು+ ಎನ್ನೊಡಲು ಆನಲು+ ಆಪೆನೆ ನಿನ್ನ ಬಹಳ+ ಅಧ್ವಾನವನು, ಸಾಕು+ ಎನ್ನ ಕಳುಹು, ಮಹಾ ನಿಧಾನವ ಮಾಣು ಮಾಣು,+ ಎನೆ ಪಾರ್ಥನು+ ಇಂತೆಂದ.

ಏನು ಮತ್ಸ್ಯಕುಮಾರ! ಭವಣೆಯಿದೇನು ನಿನಗೆ+ ಎಂದೆನಲು= ಅರ್ಜುನನು, ಇದೇನಪ್ಪ ನಿನ್ನ ಬವಣೆ- ಕಠಿಣ ಸ್ಥಿತಿ? ಎಂದು ಕೇಳಲು, ಅವನು, ಜಗದ+ ಅವಸಾನದಂದದಿ ಸಿಡಿಲು ಸುಳಿದುದು= ಪ್ರಳಯಕಾಲದಲ್ಲಿ ಬರುವಂತೆ ಸಿಡಿಲು ಹೊಡೆಯಿತು; ಬಿರಿದುದು+ ಎನ್ನೊಡಲು= ನನ್ನ ಎದೆ ಒಡೆದಂತಾಯಿತು ಎಂದನು, ಆನಲು+ ಆಪೆನೆ ನಿನ್ನ ಬಹಳ+ ಅಧ್ವಾನವನು= ನಿನ್ನ ಈ ಆರ್ಭಟವನ್ನು ನಾನು ಸಹಿಸಬಲ್ಲೆನೇ? ಸಾಕು+ ಎನ್ನ ಕಳುಹು= ಸಾಕು ನನ್ನನ್ನು ಕಳಿಸಿಬಿಡು,, ಮಹಾ ನಿಧಾನವ ಮಾಣು ಮಾಣು,+= ದೊಡ್ಡ ಎಚ್ಚರಿಕೆಯ ಆರ್ಭಟ ಮಾಡಲೇ ಬೇಡ, ಎನೆ- ಎನ್ನಲು, ಪಾರ್ಥನು+ ಇಂತೆಂದ= ಅರ್ಜುನನು ಹೀಗೆ ಹೇಳಿದನು. (ಅರ್ಜುನನ ಗಾಂಡೀವದ ಠೇಂಕಾರ ಹಾಗೆ ಬರಸಿಡಿಲಿನಂತೆ ಇತ್ತು,ಎಂದು ಭಾವ.)

ಅರ್ಥ: ಏನು ಮತ್ಸ್ಯಕುಮಾರ! ಭವಣೆಯಿದೇನು ನಿನಗೆ+ ಎಂದೆನಲು= ಅರ್ಜುನನು, ಇದೇನಪ್ಪ ನಿನ್ನ ಬವಣೆ- ಕಠಿಣ ಸ್ಥಿತಿ? ಎಂದು ಕೇಳಲು, ಅವನು, ಜಗದ+ ಅವಸಾನದಂದದಿ ಸಿಡಿಲು ಸುಳಿದುದು= ಪ್ರಳಯಕಾಲದಲ್ಲಿ ಬರುವಂತೆ ಸಿಡಿಲು ಹೊಡೆಯಿತು; ಬಿರಿದುದು+ ಎನ್ನೊಡಲು= ನನ್ನ ಎದೆ ಒಡೆದಂತಾಯಿತು ಎಂದನು, ಆನಲು+ ಆಪೆನೆ ನಿನ್ನ ಬಹಳ+ ಅಧ್ವಾನವನು= ನಿನ್ನ ಈ ಆರ್ಭಟವನ್ನು ನಾನು ಸಹಿಸಬಲ್ಲೆನೇ? ಸಾಕು+ ಎನ್ನ ಕಳುಹು= ಸಾಕು ನನ್ನನ್ನು ಕಳಿಸಿಬಿಡು,, ಮಹಾ ನಿಧಾನವ ಮಾಣು ಮಾಣು,+= ದೊಡ್ಡ ಎಚ್ಚರಿಕೆಯ ಆರ್ಭಟ ಮಾಡಲೇ ಬೇಡ, ಎನೆ- ಎನ್ನಲು, ಪಾರ್ಥನು+ ಇಂತೆಂದ= ಅರ್ಜುನನು ಹೀಗೆ ಹೇಳಿದನು.

**ಖೇಡನಾಗದಿರದುಭುತ ಧ್ವನಿ**
**ಮಾಡೆನಂಜದಿರಂಜದಿರು ಧೃತಿ**
**ಮಾಡಿಕೊಂಡೀ ರಥವ ಜೋಡಿಸೆನುತ್ತ ಸಂತೈಸಿ**
**ಮೂಡಿಗೆಯ ಅಂಬುಗಿದು ತಿರುವಿಗೆ**
**ಹೂಡಿದನು ಫಲುಗುಣನ ಕದನವ**
**ನೋಡಲಮರಶ್ರೇಣಿ ಮೇಳೈಸಿತ್ತು ಗಗನದಲಿ ॥ 66 ॥**

ಪದವಿಭಾಗ-ಅರ್ಥ: ಖೇಡನಾಗದಿರು+ ಅದುಭುತ ಧ್ವನಿಮಾಡೆನು+ ಅಂಜದಿರು+ ಅಂಜದಿರು ಧೃತಿಮಾಡಿಕೊಂಡು+ ಈ ರಥವ ಜೋಡಿಸು+ ಎನುತ್ತ ಸಂತೈಸಿ ಮೂಡಿಗೆಯ ಅಂಬುಗಿದು ತಿರುವಿಗೆ ಹೂಡಿದನು ಫಲುಗುಣನ ಕದನವ ನೋಡಲು+ ಅಮರಶ್ರೇಣಿ ಮೇಳೈಸಿತ್ತು ಗಗನದಲಿ.

ಖೇಡನಾಗದಿರು+ ಅದುಭುತ ಧ್ವನಿಮಾಡೆನು+ ಅಂಜದಿರು+ ಅಂಜದಿರು= ಅಂಜುಬುರುಕನಾಗಬೇಡ, ಅದ್ಭುತವಾದ ಠೇಂಕಾರವನ್ನು ಇನ್ನು ಮಾಡುವುದಿಲ್ಲ; ಭಯಪಡಬೇಡವೊ ಭಯಪಡಬೇಡವೊ! ಧೃತಿಮಾಡಿಕೊಂಡು+ ಈ ರಥವ ಜೋಡಿಸು+ ಎನುತ್ತ= ಧೈರ್ಯ ಮಾಡಿಕೊಂಡು ಈ ರಥವನ್ನು ಓಡಿಸು, ಎನ್ನುತ್ತಾ, ಅರ್ಜುನನು ಉತ್ತರನನ್ನು ಸಂತೈಸಿ,// ಮೂಡಿಗೆಯ- ಬತ್ತಳಿಕೆಯ, ಅಂಬು+ ಉಗಿದು ತಿರುವಿಗೆ ಹೂಡಿದನು ಫಲುಗುಣನ ಕದನವ ನೋಡಲು+ ಅಮರಶ್ರೇಣಿ ಮೇಳೈಸಿತ್ತು ಗಗನದಲಿ= ಮೂಡಿಗೆಯ - ಬತ್ತಳಿಕೆಯಿಂದ ಅಂಬು+ ಉಗಿದು- ಬಾಣವನ್ನು ತೆಗೆದು, ತಿರುವಿಗೆ ಹೂಡಿದನು- ಬಿಲ್ಲಿನ ನಾಣಿಗೆ- ಹಗ್ಗಕ್ಕೆ ಹೂಡಿದನು. ಫಲುಗುಣನ ಕದನವ ನೋಡಲು+ ಅಮರಶ್ರೇಣಿ- ದೇವತೆಗಳ ಸಮೂಹ ಮೇಳೈಸಿತ್ತು ಗಗನದಲಿ.

ಅರ್ಥ:ಉತ್ತರಾ, ಅಂಜುಬುರುಕನಾಗಬೇಡ, ಅದ್ಭುತವಾದ ಠೇಂಕಾರವನ್ನು ಇನ್ನು ಮಾಡುವುದಿಲ್ಲ; ಭಯಪಡಬೇಡವೊ ಭಯಪಡಬೇಡವೊ! ಧೈರ್ಯ ಮಾಡಿಕೊಂಡು ಈ ರಥವನ್ನು ಓಡಿಸು, ಎನ್ನುತ್ತಾ, ಅರ್ಜುನನು ಉತ್ತರನನ್ನು ಸಂತೈಸಿ,

ಬತ್ತಳಿಕೆಯಿಂದ ಬಾಣವನ್ನು ತೆಗೆದು, ಬಿಲ್ಲಿನ ನಾಣಿಗೆ ಹೂಡಿದನು. ಅವನ ಯುದ್ಧವನ್ನು ನೋಡಲು ದೇವತೆಗಳ ಸಮೂಹ ಆಕಾಶದಲ್ಲಿ ಗುಂಪುಗೂಡಿತ್ತು.